# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಸಂಪುಟ:02 Volume:02 • ಸಂಚಿಕೆ: 60 Issue: 60 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 29.08.2024 29.08.2024 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2








ಒಳ ಪುಟಗಳಲ್ಲಿ

ದೇಶದೆಲ್ಲೆಡೆ ಹಾಕಿ ಮಾಂತ್ರಿಕ ಧ್ಯಾನ್‌ಚಂದ್‌ರ ಧ್ಯಾನ ಪುಟ 3ರಲ್ಲಿ



**ಮನೆ ಮಾರಾಟಕ್ಕಿದೆ**

ಹೊಸಪೇಟೆ ನಗರಸಭೆಯ 34ನೇ ವಾರ್ಡಿನ ಉಕ್ಕಡಕೇರಿಯಲ್ಲಿ ಪೂರ್ವ–ಪಶ್ಚಿಮ 12.80 ಮೀಟರ್, ಉತ್ತರ–ದಕ್ಷಿಣ 10.36 ಮೀಟರ್ ಒಟ್ಟು 132.66 ಚ.ಮೀಟರ್ ನಿವೇಶನದಲ್ಲಿನ ಮನೆ (A.No.644) ಮಾರಾಟಕ್ಕಿದೆ. ಆಸಕ್ತರು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ವಿ.ವೆಂಕಟೇಶ
ಮನೆ ಮಾಲೀಕರು
ಮೊ:94488 99542

ಹಂಪಿ ಟೈಮ್ಸ್ SSLC ಮಾರ್ಗದರ್ಶಿ ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


# ನಗರಸಭೆಯಲ್ಲಿ ಅಕ್ರಮ ದಾಖಲೆ ಸೃಷ್ಟಿಗೆ ಒತ್ತಡ

## ನಗರಸಭೆ ಸದಸ್ಯರ ಸಂಬಂಧಿಕರಿಂದ ಸಮರ್ಪಕ ಸೇವೆಗೆ ಅಡ್ಡಿ | ಪೌರನೌಕರರು ರಕ್ಷಣೆ ಕೋರಿ ಮೌನ ಪ್ರತಿಭಟನೆ

## ಮಹಿಳಾ ಸದಸ್ಯರ ಪತಿರಾಯರ ದರ್ಬಾರ್ | ಅನಧಿಕೃತ ನಿವೇಶನಗಳ ಫಾರಂ ನಂ.3ಗೆ ಕೆಲ ಸದಸ್ಯರ ಒತ್ತಡ

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರಸಭೆಯಲ್ಲಿ ಸಾರ್ವಜನಿಕರಿಗೆ ಸಕಾಲಿಕ ಸೇವೆ ಒದಗಿಸುವ ಪೌರ ನೌಕರರಿಗೆ ವಿನಾಃಕಾರಣ ನಗರಸಭೆ ಮಹಿಳಾ ಸದಸ್ಯರ ಸಂಬಂಧಿಗಳು ಮತ್ತವರ ಸಹಾಯಕರು ಮಾನಸಿಕ ಕಿರುಕುಳ ನೀಡುತ್ತಿದ್ದಾರೆ. ಅಲ್ಲದೆ ಕಾನೂನು ಬಾಹಿರ ಚಟವಟಿಕೆಗಳಲ್ಲಿ ಸಿಲುಕಿಸಲು ಒತ್ತಡ ಏರುತ್ತಿದ್ದು, ಅವರು ಹೇಳಿದಂತೆ ಮಾಡಿಕೊಡದಿದ್ದರೆ ಮೇಲಾಧಿಕಾರಿಗಳಿಗೆ ನಮ್ಮ ಮೇಲೆ ಇಲ್ಲ ಸಲ್ಲದ ಸುಳ್ಳು ದೂರುಗಳನ್ನು ನೀಡುತ್ತಿದ್ದು, ನಿರಾತಂಕವಾಗಿ ಕಾರ್ಯನಿರ್ವಹಿಸಲು ಕೂಡಲೇ ರಕ್ಷಣೆ ನೀಡಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ಪೌರ ನೌಕರರ ಸಂಘದ ಪದಾಧಿಕಾರಿಗಳು, ನಗರಸಭೆ ನೌಕರರು ಮೌನ ಪ್ರತಿಭಟನೆ ಮೂಲಕ ಜಿಲ್ಲಾಧಿಕಾರಿಗೆ ಬುಧವಾರ ಮನವಿ ಸಲ್ಲಿಸಿದರು.

ಸಂಘಟನೆಯ ರಾಜ್ಯಧ್ಯಕ್ಷ ಕೆ.ಪ್ರಭಾಕರ ಮಾತನಾಡಿ, ಪೌರ ನೌಕರರು ನಿಯಾಮನುಸಾರ ಸರ್ಕಾರ ಸೌಲಭ್ಯಗಳನ್ನು ಜನರಿಗೆ ತಲುಪಿಸುವಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಹಿಳಾ ಸದಸ್ಯರಿಗಿಂತ ಅವರ ಪತಿ ಸರ್ಕಾರಿ ಕೆಲಸಗಳಲ್ಲಿ ಮೂಗುತೂರಿಸುತ್ತಿದ್ದಾರೆ. ಅಕ್ರಮಕ್ಕೂ ಸಕ್ರಮವೆಂದು ದಾಖಲೆ ಪಡೆಯಲು ಯತ್ನಿಸುತ್ತಿದ್ದಾರೆ. ಅನಧಿಕೃತ ಬಡಾವಣೆಗಳ ನಿವೇಶಮನಗಳಿಗೆ ಅಧಿಕೃತ ಫಾರಂ ನಂ.ತ್ರಿ ನೀಡಬೇಕೆಂದು ಪ್ರಭಾವಿಗಳ ಮೂಲಕ ಒತ್ತಡ ಏರುತ್ತಾರೆ. ಸರ್ಕಾರಿ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಣೆಗೆ ಅಡ್ಡಿಯಾಗುತ್ತಿದೆ. ಸರ್ಕಾರ ಅನುದಾನವನ್ನು ಕಾನೂನಿಲ್ಲಿ ಅವಶ್ಯವಿಲ್ಲದ ಕಾರ್ಯಗಳಿಗೆ ಅನುದಾನ ಬಳಸಲು ಒತ್ತಡ ಹಾಕುತ್ತಿದ್ದಾರೆ. ನಗರದಲ್ಲಿ ಮೂಲಭೂತ ಸೌಲಭ್ಯಗಳಿಲ್ಲದ 50ಕ್ಕೂ ಹೆಚ್ಚು ಅನಧಿಕೃತ ಬಡಾವಣೆಗಳಿವೆ. ಇವುಗಳ ನಿರ್ವಹಣೆಗೆ ಕೋಟ್ಯಾಂತರ ರೂಪಾಯಿ ಅನುದಾನ ಬೇಕಿದೆ. ಅನುದಾನದ ಕೊರತೆಯ ನಡುವೆ ಅನಧಿಕೃತ







ಬಡಾವಣೆಗಲ್ಲಿನ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಒತ್ತಡ ಹೇರುತ್ತಿದ್ದಾರೆ. ನಗರದ ಜನಸಂಖ್ಯೆಗೆ ತಕ್ಕಂತೆ ನಗರಸಭೆಗೆ ಪೌರಕಾರ್ಮಿಕರಿಲ್ಲದಿದ್ದರೂ ಅಗತ್ಯಾನುಸಾರ ವಾರ್ಡಿನಲ್ಲಿ ಚರಂಡಿ ಸ್ವಚ್ಛತೆಯೂ ಕೈಗೊಳ್ಳಲಾಗುತ್ತಿದೆ.

ಕೆಲ ಜನಪ್ರತಿನಿಧಿಗಳು, ಅವರ ಕುಟುಂಬದ ಸದಸ್ಯರು, ಅವರ ಆಪ್ತರು ಸಹ ನಮ್ಮನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಅವಹೇಳನ ಮಾಡುತ್ತಿದ್ದಾರೆ. ಈ ಹಿಂದೆ ನಿಯಮ ಬಾಹಿರ ಕೃತ್ಯಗಳಿಂದ ಪಾರ್ಕ್‌ಗಳು, ಸಿ.ಎ. ನಿವೇಶನಗಳು, ಸರ್ಕಾರದ ಜಮೀನುಗಳನ್ನು, ಹಳ್ಳದ ಹಕ್ಕ–ಪಕ್ಕದ ಬಫರ್ ಝೋನ್‌ಗಳು ಸೇರಿದಂತೆ ಇತರ ಜಾಗಗಳನ್ನು ನೌಕರರ ಮೇಲೆ ಒತ್ತಡ ಹೇರಿ ದಾಖಲಾತಿ ಸೃಷ್ಟಿಸಿಕೊಂಡಂತರ ಪ್ರಕರಣಗಳು ಜರಗಿದ್ದು, ಸರ್ಕಾರಕ್ಕೆ ಕೋಟ್ಯಾಂತರ ರೂಪಾಯ ಮೌಲ್ಯದ ಆಸ್ತಿಗಳು ನಷ್ಟವಾಗಿವೆ. ಕಂದಾಯ, ತಾಂತ್ರಿಕ ಹಾಗೂ ಆರೋಗ್ಯ ವಿಭಾಗದಲ್ಲಿ ಅನಗತ್ಯವಾಗಿ ನಿಯಮಬಾಹಿರ ಕೃತ್ಯಗಳಿಗೆ ಅವಕಾಶ ನೀಡದಂತೆ ಹಾಗೂ ನಗರಸಭೆಯ ಅಧಿಕಾರಿಗಳಿಗೆ ಹಾಗೂ ನೌಕರರಿಗೆ ಸುರಕ್ಷಿತವಾಗಿ ಸಾರ್ವಜನಿಕ ಸೇವೆ ಸಲ್ಲಿಸಲು ಹಾಗೂ ರಕ್ಷಣೆ ನೀಡಬೇಕೆಂದು ಒತ್ತಾಯಿಸಿದರು.

ನಗರಸಭೆ ಪೌರಾಯುಕ್ತ ಚಂದ್ರಪ್ಪ ಮಾತನಾಡಿ, ನಗರಸಭೆ ಸದಸ್ಯರ ಆರೋಪಗಳು ಸತ್ಯಕ್ಕೆ ದೂರವಾಗಿವೆ. ನಗರದ ಸಮಸ್ಯೆಗಳಿಗೆ ಕಾನೂನಿ ಚೌಕಟ್ಟಿನೊಳಗೆ ಸ್ಪಂದಿಸುತ್ತಿದ್ದೇನೆ. ಏಕಾಏಕಿ 35 ಸದಸ್ಯರು ನನ್ನ ವಿರುದ್ಧ ಆರೋಪ ಮಾಡುತ್ತಿರುವುದು ನನಗೆ ಆಶ್ಚರ್ಯವನ್ನುಂಟು ಮಾಡಿದೆ. ನಿಯಮಾನುಸಾರ ಕಾರ್ಯನಿರ್ವಹಿಸಲಾಗುತ್ತಿದೆ ಎಂದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮನವಿ ಸ್ವೀಕರಿಸಿ ಮಾತನಾಡಿ, ಯಾರ ಒತ್ತಡಕ್ಕೂ ಮಣಿಯಬೇಕಿಲ್ಲ. ಸಾರ್ವಜನಿಕರಿಗೆ ಸರ್ಕಾರ ಸೇವೆ ಸಮರ್ಪಕವಾಗಿ ನೀಡಬೇಕು. ಸಾರ್ವಜನಿಕರನ್ನು ವಿನಾಃಕಾರಣ ಅಲೆದಾಡಿಸಿದರೆ, ಸೇವೆ ಸಲ್ಲಿಸುವಲ್ಲಿ ವಿಳಂಬ ಮಾಡಿದರೆ ಸಿಬ್ಬಂದಿಗಳ ಮೇಲೂ ಕ್ರಮಜರುಗಿಸಲಾಗುವುದು. ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸುವವರ ವಿರುದ್ಧ ಕ್ರಮಕೈಗೊಳ್ಳಲಾಗುವುದು ಎಂದರು.

ಸಂಘಟನೆಯ ಶಾಖಾ ಸಂಘದ ಅಧ್ಯಕ್ಷ ವೈ.ಸುಂಕಪ್ಪ, ಉಪಾಧ್ಯಕ್ಷ ಜಿ.ನೀಲಕಂಠಸ್ವಾಮಿ, ನಗರಸಭೆ ಪೌರ ಕಾರ್ಮಿಕರು, ಸಿಬ್ಬಂದಿ ಇದ್ದರು.

# ಗ್ಯಾರಂಟಿ ಫಲಾನುಭವಿಗಳಿಗೆ ಹಣ ಪಾವತಿ

## ಉಪಾಧ್ಯಕ್ಷರಿಗೆ ಯೋಜನೆಗಳ ಅನುಷ್ಠಾನ ವರದಿ ಒಪ್ಪಿಸಿದ ಅಧಿಕಾರಿಗಳು



■ **ಹಂಪಿ ಟೈಮ್ಸ್ ಹೊಸಪೇಟೆ**

ಗ್ಯಾರಂಟಿ ಯೋಜನೆಗಳು ಸಮರ್ಪಕ ಅನುಷ್ಠಾನದಿಂದ ಯಶಸ್ವಿಯಾಗಿದ್ದು, ಆಯಾ ಜಿಲ್ಲೆಗಳಲ್ಲಿ ಫಲಾನುಭವಿಗಳ ಸಮಾವೇಶವನ್ನು ಆಯೋಜಿಸಲು ಚಿಂತನೆ ನಡೆದಿದೆ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಕಲಬುರಗಿ ವಿಭಾಗದ ಉಪಾಧ್ಯಕ್ಷರಾದ ಎಸ್.ಆರ್. ಮೆಹರೋಜ್ ಖಾನ್ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಐದು ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಗ್ಯಾರಂಟಿ ಯೋಜನೆಗಳು ಸೇರಿದಂತೆ ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಅಧಿಕಾರಿಗಳು ಗ್ಯಾರಂಟಿ ಯೋಜನೆಯ ಅನುಷ್ಠಾನದ ಪ್ರಾಧಿಕಾರದ ಅಧ್ಯಕ್ಷರಿಗೆ ಸಹ ಆಮಂತ್ರಣ ನೀಡಬೇಕು. ತಾಲೂಕುಮಟ್ಟದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಹ ಆಮಂತ್ರಣ ನೀಡಬೇಕು ಎಂದು ಎಲ್ಲ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗೃಹಲಕ್ಷ್ಮಿ ಯೋಜನೆಯಡಿ ವಿಜಯನಗರ ಜಿಲ್ಲೆಯ ಅರ್ಹ ಯಜಮಾನಿ ಮಹಿಳೆಯರಿಗೆ 2000 ರೂ. ಧನ ಸಹಾಯ ಪಾವತಿ ಮಾಡುತ್ತಿದ್ದು, 2023ರ ಆಗಸ್ಟ್ 23ರಿಂದ 2024ರ ಜೂನ್ ಮಾಹೆವರೆಗೆ 582,58,80,000 ರೂ ಪಾವತಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಉಪ ನಿರ್ದೇಶಕರಾದ ಶ್ವೇತಾ ಮಾಹಿತಿ ನೀಡಿದರು.

ಗೃಹಜ್ಯೋತಿ ಯೋಜನೆಯಡಿ ವಿಜಯ ನಗರ ಜಿಲ್ಲೆಯಲ್ಲಿ 2024ರ ಜುಲೈ ಅಂತ್ಯಕ್ಕೆ ಡಿಬಿಟಿ ಮೂಲಕ 133.59 ಕೋಟಿ ರೂ.ಗಳನ್ನು ಪಾವತಿಸಲಾಗಿದೆ ಎಂದು ಜೆಸ್ಕಾಂನ ಅಧಿಕಾರಿಗಳು ಮಾಹಿತಿ ನೀಡಿದರು.

ಯುವನಿಧಿ ಯೋಜನೆಯಡಿ ಜನವರಿ 2024ರಿಂದ ಜುಲೈ 24ರವರೆಗೆ 6643 ಪದವೀಧರರಿಗೆ ತಿಂಗಳಿಗೆ 3000 ರೂ.ರಂತೆ ಹಾಗೂ 61 ಡಿಪ್ಲೋಮಾ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ.1500 ರೂನಂತೆ ಒಟ್ಟು 6074 ವಿದ್ಯಾರ್ಥಿಗಳಿಗೆ ರೂ.2,00,20,500 ರೂ.ಗಳನ್ನು ಪಾವತಿಸಲಾಗಿದೆ ಎಂದು ಜಿಲ್ಲಾ ಕೌಶಲ್ಯಾಭಿವೃದ್ದಿ ಯೋಜನಾಧಿಕಾರಿ ಪಿ.ಎಸ್.ಅಟ್ಟಪ್ಪ ತಿಳಿಸಿದರು.

ಅನ್ನಭಾಗ್ಯ ಯೋಜನೆಯಡಿ ವಿಜಯನಗರ ಜಿಲ್ಲೆಯಲ್ಲಿ 2023ರ ಜುಲೈ 2023ರಿಂದ ಜೂನ್ 2024ರವರೆಗೆ 1,87,72,16,500 ವೆಚ್ಚ ಭರಿಸಲಾಗಿದೆ ಎಂದು ಆಹಾರ ಇಲಾಖೆಯ ಉಪ ನಿರ್ದೇಶಕರಾದ ರಿಯಾಜ್ ತಿಳಿಸಿದರು.

ಶಕ್ತಿ ಯೋಜನೆಯಡಿ ವಿಜಯನಗರ ಜಿಲ್ಲೆಯಲ್ಲಿ 4,17,54,532 ಸಂಖ್ಯೆಯ ಪ್ರಯಾಣಿಕರು ಶಕ್ತಿ ಯೋಜನೆಯಡಿ ಪ್ರಯಾಣಿಸಿದ್ದು ಇದರಿಂದ ಸಾರಿಗೆ ಇಲಾಖೆಗೆ 153,95,62,164 ರೂಪಾಯಿ ಆದಾಯ ಬಂದಿದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿಗಳು ಮಾಹಿತಿ ನೀಡಿದರು.

ಸಭೆಯಲ್ಲಿ ಜಿಪಂ ಸಿಇಒ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ ಷಾಹ, ಜಿಪಂ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ, ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿ ಜೆ.ಎಂ.ಅನ್ನದಾನಸ್ವಾಮಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ವಿಜಯನಗರ ಜಿಲ್ಲಾಧ್ಯಕ್ಷರಾದ ಕೆ. ಶಿವಮೂರ್ತಿ, ಉಪಾಧ್ಯಕ್ಷರಾದ ಕೆ.ಬದಾವಲಿ, ಇತರರು ಇದ್ದರು.

# ಶಾಲಾ ಕೊಠಡಿಗಳ ಭೂಮಿ ಪೂಜೆ



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನ ವರದಾಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಯೋಜನಡಿಯಲ್ಲಿ ನೂತನವಾಗಿ ನಿರ್ಮಾಣವಾಗುವ ಶಾಲಾ ಕೊಠಡಿಗಳಿಗೆ ಶಾಸಕ ಕೆ.ನೇಮಿರಾಜ್‌ನಾಯ್ಕ್ ಬುಧವಾರ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಯೋಜನೆಯಡಿ 1ಕೋಟಿ ರೂ. ವೆಚ್ಚದಲ್ಲಿ 5ಕೊಠಡಿಗಳನ್ನು ನಿರ್ಮಾಣ ಮಾಡಲಾಗುವುದು. ಶಿಕ್ಷಣಕ್ಕಾಗಿ ನೂತನ ಕೊಠಡಿಗಳ ಕಟ್ಟಡ ನಿರ್ಮಾಣ, ಸೇರಿದಂತೆ ಕ್ರೀಡಾ ಸಾಮಾಗ್ರಿಗಳನ್ನು ಪೂರೈಸುವ ಮೂಲಕ ಶಿಕ್ಷಣಕ್ಕೆ ಒತ್ತು ಕೊಡಲಾಗುತ್ತಿದೆ. ಅದರಂತೆ ಕ್ಷೇತ್ರದಲ್ಲಿ ಆರೋಗ್ಯ ಮತ್ತು ಶಿಕ್ಷಣ ಅಭಿವೃದ್ಧಿಗೆ ಆಧ್ಯತೆ ನೀಡಲಾಗುತ್ತಿದೆ ಎಂದರು.

ಈ ವೇಳೆ ಪಿ.ಸೂರ್ಯಬಾಬು, ಕಡ್ಲೆಪ್ಪ, ಮುಗುಲಿ ಭೀಮಣ್ಣ, ಮಹಾದೇವಗೌಡ, ಭಾಷಸಾಬ್, ಪಿ.ರಾಜಲಿಂಗಪ್ಪ, ಜಯಪ್ರಕಾಶ್ ಗೌಡ, ಶಿವನಗೌಡ, ಹಂಪಾಪಟ್ಟಣ ಕೊಟ್ರೇಶ್, ಸೋಮಶೇಖರ್, ಹೋಟಲ್ ಸಿದ್ದರಾಜ್, ಶಾಲೆಯ ಮುಖ್ಯಶಿಕ್ಷಕಿ ಭಾರತಿ, ಎಸ್.ಡಿ.ಎಂ.ಸಿ ಪದಾಧಿಕಾರಿಗಳು ಸೇರಿದಂತೆ ಗ್ರಾಮದ ಮುಖಂಡರು ಶಾಲಾ ಶಿಕ್ಷಕರು ಪಾಲ್ಗೊಂಡಿದ್ದರು.




# ವಿಜ್ಞಾನ

## ಸೂರ್ಯಾಸ್ತ ಮತ್ತು ಸೂರ್ಯೋದಯದ ವೇಳೆಯಲ್ಲಿ ಸೂರ್ಯನು ಏಕೆ ಕೆಂಪಾಗಿ ಕಾಣುತ್ತಾನೆ?

■ ಆರ್.ಬಿ.ಗುರುಬಸವರಾಜ

ಸಂಜೆ ವೇಳೆ ಟೆರೆಸ್ ಮೇಲೆ ಗೌಸಿಯಾ, ಸಾನಿಯಾ ಮತ್ತು ಬೇಗಂ ಮೂವರೂ ಚೌಕಬಾರ ಆಡುತ್ತಿದ್ದರು. ಸೂರ್ಯ ಅಸ್ತಮಿಸುವ ಸಮಯದಲ್ಲಿ ಇಡೀ ವಾತಾವರಣ ಕೆಂಪೇರಿತ್ತು. ಭೂಮಿಗೆ ಒಂದು ರೀತಿಯ ಕೆಂಪು ಬಣ್ಣ ಸಿಂಪಡಿಸಿದಂತಿತ್ತು. ಆಕಾಶದಲ್ಲಿ ವರ್ಣರಂಜಿತ ಚಿತ್ತಾರ ಮೂಡಿತ್ತು. ಮೂವರು ಗೆಳತಿಯರು ಈ ಸನ್ನಿವೇಶವನ್ನು ನೋಡಿ ಮೂಕವಿಸ್ಮಿತರಾದರು. ಆಟವನ್ನು ಮರೆತು ಪ್ರಕೃತಿ ವೀಕ್ಷಣೆಯಲ್ಲಿ ಮಗ್ನರಾದರು. ಪ್ರಶ್ನೆಗಳಿಗೆ ಹೆಸರು ವಾಸಿಯಾಗಿದ್ದ ಗೌಸಿಯಾಳ ಮನದಲ್ಲಿ ಒಂದು ಪ್ರಶ್ನೆ ಮೂಡಿತು. ತಟ್ಟನೇ ಅದನ್ನು ಕೇಳಿದಳು. ಅವರಿಗೂ ಈ ಬಗ್ಗೆ ಏನೂ ತಿಳಿದಿರಲಿಲ್ಲ. ಕೂಡಲೇ ಕೆಳಗಿಳಿದು ಬಂದು ಸಹೋದರ ಸಮೀರನಿಗೆ "ಭೈಯಾ, ಸೂರ್ಯಾಸ್ತ ಮತ್ತು ಸೂರ್ಯೋದಯದ ವೇಳೆಯಲ್ಲಿ ಸೂರ್ಯನು ಏಕೆ ಕೆಂಪಾಗಿ ಕಾಣುತ್ತಾನೆ?" ಎಂದಳು. ಅದಕ್ಕೆ ಸಹೋದರನ ಉತ್ತರ ಹೀಗಿದೆ.



'ಚದುರುವಿಕೆ' ಎಂದು ಕರೆಯಲ್ಪಡುವ ಒಂದು ವಿದ್ಯಮಾನದಿಂದಾಗಿ ಸೂರ್ಯಾಸ್ತ ಮತ್ತು ಸೂರ್ಯೋದಯದ ಸಮಯದಲ್ಲಿ ಸೂರ್ಯನು ಕೆಂಪು ಬಣ್ಣದಲ್ಲಿ ಕಾಣುತ್ತಾನೆ. ಸೂರ್ಯನು ದಿಗಂತದಲ್ಲಿ ಕೆಳಗೆ ಇದ್ದಾಗ, ಸೂರ್ಯನ ಬೆಳಕು ನಮ್ಮ ಕಣ್ಣುಗಳನ್ನು ತಲುಪುವ ಮೊದಲು ಭೂಮಿಯ ಹೆಚ್ಚಿನ ವಾತಾವರಣದ ಮೂಲಕ ಚಲಿಸಬೇಕಾಗುತ್ತದೆ. ಭೂಮಿಯ ವಾತಾವರಣವು ವಿವಿಧ ಅನಿಲಗಳು ಮತ್ತು ಕಣಗಳಿಂದ ಮಾಡಲ್ಪಟ್ಟಿದೆ. ಇದು ಸೂರ್ಯನ ಬೆಳಕನ್ನು ವಿವಿಧ ರೀತಿಯಲ್ಲಿ ಹರಡುತ್ತದೆ. ನೀಲಿ ಬೆಳಕು ಕಡಿಮೆ ತರಂಗಾಂತರವನ್ನು ಹೊಂದಿದೆ. ಭೂಮಿಯ ವಾತಾವರಣವು ಕಡಿಮೆ ತರಂಗಾಂತರದ ನೀಲಿ ಮತ್ತು ಹಸಿರು ಬೆಳಕನ್ನು ಹೀರಿಕೊಳ್ಳುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಕೆಂಪು ಬೆಳಕು ದೀರ್ಘ ತರಂಗಾಂತರವನ್ನು ಹೊಂದಿದ್ದು ಸುಲಭವಾಗಿ ಚದುರುತ್ತದೆ. ಇದರಿಂದಾಗಿ ಸೂರ್ಯಾಸ್ತ ಮತ್ತು ಸೂರ್ಯೋದಯದ ಸಮಯದಲ್ಲಿ ಸೂರ್ಯನು ಕೆಂಪು ಅಥವಾ ಕಿತ್ತಳೆ ಬಣ್ಣದಲ್ಲಿ ಕಾಣುತ್ತಾನೆ.

ಭೂಮಿಯ ವಾತಾವರಣವು ದೈತ್ಯ ಮಸೂರದಂತೆ ಕಾರ್ಯನಿರ್ವಹಿಸುತ್ತದೆ. ಇದು ಸೂರ್ಯನ ಬೆಳಕನ್ನು ಬಾಗಿಸುತ್ತದೆ ಮತ್ತು ವಾಸ್ತವಕ್ಕಿಂತ ದೊಡ್ಡದಾಗಿ ಕಾಣುವಂತೆ ಮಾಡುತ್ತದೆ. ವಾತಾವರಣದ ವಕ್ರೀಭವನ ಎಂದು ಕರೆಯಲ್ಪಡುವ ಈ ಪರಿಣಾಮವು ಸೂರ್ಯೋದಯ ಮತ್ತು ಸೂರ್ಯಾಸ್ತದ ಸಮಯದಲ್ಲಿ ಸೂರ್ಯನ ಕೆಂಪು ಅಥವಾ ಕಿತ್ತಳೆ ಬಣ್ಣವನ್ನು ಇನ್ನಷ್ಟು ಹೆಚ್ಚಿಸುತ್ತದೆ.

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.


**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಜಗಳೂರು ಮಹಮದ್ ಇಮಾಂ



ಕರ್ನಾಟಕದ ರಾಜಕಾರಣದಲ್ಲಿ ಹೆಚ್ಚು ಚರ್ಚೆಗೆ ಒಳಗಾಗದ ಅನೇಕ ರಾಜಕಾರಣಿಗಳಿದ್ದಾರೆ. ಇವರಲ್ಲಿ ಮೈಸೂರಿನ ದಿವಾನರಾಗಿದ್ದ ರಂಗಾಚಾರ್ಲು, ಮಿರ್ಜಾ ಇಸ್ಮಾಯಿಲ್; ಮುಂಬೈ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಸರ್ ಸಿದ್ಧಪ್ಪ ಕಂಬಳಿ, ಮದ್ರಾಸ್ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಹೊಸಪೇಟೆಯ ನಾಗನಗೌಡರು, ಮೈಸೂರು ರಾಜ್ಯದಲ್ಲಿ ಮಂತ್ರಿಯಾಗಿದ್ದ ಜಗಳೂರು ಇಮಾಂ ಸೇರಿದ್ದಾರೆ. ಇವರೆಲ್ಲ ಶಾಸಕರು ದಿವಾನರು ಸಂಸದರು ಮಂತ್ರಿಗಳು ಮಾತ್ರವಲ್ಲ, ನಾಡನ್ನು ಕಟ್ಟುವ ಕನಸುಳ್ಳ ಮುತ್ಸದ್ದಿಗಳೂ ಆಗಿದ್ದವರು. ಘನತೆವೆತ್ತ ಮನುಷ್ಯರಾಗಿದ್ದರು. ರಾಜಕಾರಣದಿಂದ ಸಂಪತ್ತನ್ನು ಗಳಿಸಿದವರಲ್ಲ. ಸಾರ್ವಜನಿಕರಿಗಾಗಿ ಬಾಳನ್ನು ತೇದವರು. ಇವರ ಕೆಲಸ ಮತ್ತು ಚಿಂತನೆಗಳ ಬಗ್ಗೆ ನಮ್ಮ ತಾತ್ವಿಕ ಭಿನ್ನಮತವಿರಬಹುದು. ಆದರೆ ಇವರ ಪ್ರಾಮಾಣಿಕತೆಯನ್ನು ಗೌರವಿಸದೆ ಇರಲಾಗದು. ಇಮಾಮರು ತಮ್ಮ ಜೀವಿತದ ಕೊನೆಯ ದಿನಗಳಲ್ಲಿ ಬರೆದ 'ಮೈಸೂರು ಅಂದು ಇಂದು' (1966) ಪುಸ್ತಕ, ಕನ್ನಡದಲ್ಲಿ ವಿಶಿಷ್ಟ ಪುಸ್ತಕ. ಇದು ಆತ್ಮಕಥೆಯಲ್ಲ. ಆತ್ಮಕಥನಾತ್ಮಕ ನಿರೂಪಣೆಯಿರುವ ಸಾರ್ವಜನಿಕ ಬದುಕಿನ ದಾಖಲೆ.

ಜಗಳೂರು ಮಹಮದ್ ಇಮಾಂ (1897–1983) ಮೂಲತಃ ರಾಜಕೀಯ ಕುಟುಂಬದಲ್ಲಿ ಹುಟ್ಟಿದವರು. ಅವರ ಅಜ್ಜ 100ರೂಪಾಯಿಗೂ ಹೆಚ್ಚಿನ ಭೂಕಂದಾಯ ಸಲ್ಲಿಸುತ್ತಿದ್ದ ಜಮೀನ್ದಾರರೇ ಸೇರಿ ಆಯ್ಕೆ ಮಾಡಿಕೊಳ್ಳುತ್ತಿದ್ದ ಪದ್ಧತಿಯಲ್ಲಿ, ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದವರು. ಇಮಾಮರ ತಂದೆ ಕೂಡ ರಾಜಕಾರಣದಲ್ಲಿದ್ದವರು. ಇಮಾಂ ಈ ರಾಜಕಾರಣದ ಮೂರನೆಯ ತಲೆಮಾರು. ಮದರಾಸಿನಲ್ಲಿ ವಕೀಲಿ ಪದವಿ ಪಡೆದಿದ್ದ ಇವರು ಜಗಳೂರು ಟೌನ್ ಮುನ್ಸಿಪಲ್ ಅಧ್ಯಕ್ಷರಾಗಿ ರಾಜಕೀಯ ಜೀವನ ಆರಂಭಿಸಿದರು. ಜಯಚಾಮರಾಜೇಂದ್ರ ಒಡೆಯರ್ ಆಳ್ವಿಕೆಯಲ್ಲಿ, ನ್ಯಾಪತಿ ಮಾಧವರಾಯರು ದಿವಾನರಾಗಿದ್ದಾಗ ಮೈಸೂರು ರಾಜ್ಯದ ಅಬಕಾರಿ ನೀರಾವರಿ ಲೋಕೋಪಯೋಗಿ ಶಿಕ್ಷಣ ರೈಲ್ವೆ ಗೃಹ ಸಹಕಾರ ಕೈಗಾರಿಕೆ ವಿದ್ಯುತ್ ?ಹೀಗೆ ಒಂಬತ್ತು ಖಾತೆಗಳಿಗೆ ಮಂತ್ರಿಯಾಗಿದ್ದರು. ಸ್ವತಂತ್ರಗೊಂಡ ಭಾರತದಲ್ಲಿ ಇಮಾಂ ಜಗಳೂರಿನ ಶಾಸಕರಾಗಿಯೂ ಪ್ರಜಾ ಸೋಶಲಿಸ್ಟ್ ಪಕ್ಷದಿಂದ ಚಿತ್ರದುರ್ಗದ ಸಂಸದರಾಗಿಯೂ ಆರಿಸಿ ಬಂದರು. ಕೆಂಗಲ್ ಹನುಮಂತಯ್ಯ ಮುಖ್ಯಮಂತ್ರಿ ಆಗಿದ್ದಾಗ, ಪ್ರಜಾಸೋಶಲಿಸ್ಟ್ ಪಕ್ಷದಿಂದ ವಿರೋಧಪಕ್ಷದ ನಾಯಕರಾಗಿದ್ದರು. ಕರ್ನಾಟಕ ಏಕೀಕರಣದ ಚಳುವಳಿಯಲ್ಲಿ ಕೆಲಸ ಮಾಡಿದ ಇಮಾಮರು, ವೈಯಕ್ತಿಕವಾಗಿ ನೆಹರೂ ಮತ್ತು ಕೆಂಗಲ್ ಅಭಿಮಾನಿಗಳು. ಇಂದಿರಾ ಗಾಂಧಿಯವರನ್ನು ಎಮರ್ಜನ್ಸಿಯಲ್ಲಿ ವಿರೋಧಿಸಿದವರು. ಶಾಸಕ–ಸಂಸದ–ಮಂತ್ರಿ ಆಗಿದ್ದಾಗ, ಕಡಿಮೆ ಮಳೆ ಬೀಳುವ ಜಗಳೂರು ತಾಲೂಕಿನಾದ್ಯಂತ ಕೆರೆಗಳನ್ನು ಕಟ್ಟಿಸಿದರು. ಮಂತ್ರಿ ಪದವಿಯಿಂದ ನಿವೃತ್ತರಾದ ಬಳಿಕ, ಬೆಂಗಳೂರನ್ನು ತೊರೆದು ಹುಟ್ಟೂರಿಗೆ ಹಿಂದಿರುಗಿ ವ್ಯವಸಾಯ ಮಾಡಿಸಿಕೊಂಡು ಸರಳ ಜೀವನ ಮಾಡಿದರು. ರಾಜಕಾರಣವು ಹಣಗಳಿಕೆಯ ವೃತ್ತಿಯಲ್ಲ. ಅದೊಂದು ಸಾರ್ವಜನಿಕ ಸೇವೆ ಎಂದು ನಂಬಿದ್ದ ಇಮಾಂ. ತಮ್ಮ ಖಾಸಗಿ ಬಂಗಲೆಯನ್ನು ಕಾಲೇಜು ನಡೆಸಲು ಕೊಟ್ಟು, ಅದರ ಔಟ್ಹೌಸಿನಲ್ಲಿ ಕೊನೆಯ ದಿನಗಳನ್ನು ಕಳೆದರು.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

'ಮೈಸೂರು ಆಗ ಮತ್ತು ಈಗ' ಕೃತಿಯಲ್ಲಿ ಇಮಾಮರ ವೈಯಕ್ತಿಕ ಬದುಕಿನ ವಿವರಗಳಿಲ್ಲ. ಅವರ ರಾಜಕೀಯ ಅನುಭವಗಳ ದಾಖಲೆಯಿದೆ. ಹತ್ತನೇ ಚಾಮರಾಜ ಒಡೆಯರ್ ಅವರ ಕಾಲದಿಂದ (1881) ಜಯಚಾಮರಾಜೇಂದ್ರ ಒಡೆಯರ್ ತನಕ (1948) ಸುಮಾರು ಏಳು ದಶಕಗಳ, ಮೂರು ದೊರೆಗಳ ಕಾಲದ ಮೈಸೂರು ಆಡಳಿತದ ಚಿತ್ರಗಳಿವೆ. ಈ ದೃಷ್ಟಿಯಿಂದ ಇದು ಡಿವಿಜಿಯವರ 'ದಿವಾನ್ ರಂಗಾಚಾರ್ಲು', ಸಿಂಗ್ರಯ್ಯನವರ 'ಶ್ರೀ ಹತ್ತನೇ ಚಾಮರಾಜೇಂದ್ರ ಒಡೆಯರವರು', ನವರತ್ನ ರಾಮರಾವ್ ಅವರ 'ಕೆಲವು ನೆನಪುಗಳು', ಡಿವಿಜಿಯವರ 'ಮೈಸೂರಿನ ದಿವಾನರು' ಗಳ ಜತೆ ಓದಬೇಕಾದ ಸಹಪಠ್ಯ. ಈ ಕೃತಿಯ ಎರಡನೆಯ ಭಾಗದಲ್ಲಿ, ಮೊದಲ ಸ್ವತಂತ್ರ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿ ಕೆ.ಸಿ.ರೆಡ್ಡಿಯವರಿಂದ ಹಿಡಿದು ನಿಜಲಿಂಗಪ್ಪನವರ ತನಕ ಆಡಳಿತದ ವಿವರಗಳಿವೆ. ಇಮಾಂ, ಎರಡೂ ಎರಡೂ ರಾಜಕೀಯ ಪದ್ಧತಿಯಲ್ಲಿ ಅಧಿಕಾರ ನಡೆಸಿದವರು. ಹೀಗಾಗಿ ಈ ಪುಸ್ತಕ ಕರ್ನಾಟಕದ ರಾಜಪ್ರಭುತ್ವ ಮತ್ತು ಪ್ರಜಾಪ್ರಭುತ್ವದ ಎರಡೂ ಮಾದರಿಯ ಆಡಳಿತಗಳ ತೌಲನಿಕ ಅಧ್ಯಯನವಾಗಿದೆ. ತಾವು ಮೂಲತಃ ಲೇಖಕರಲ್ಲವೆಂದೂ ತಮ್ಮ ಕನ್ನಡ ಕಲಿಕೆಗೆ ಗುರುಗಳಾದ ಟಿ.ಎಸ್. ವೆಂಕಣ್ಣಯ್ಯನವರೇ ಕಾರಣರೆಂದೂ ಇಮಾಂ ನಮ್ರತೆಯಿಂದ ಹೇಳಿದರೂ, ಇಲ್ಲಿ ಸೊಗಸಾದ ಕನ್ನಡವಿದೆ. ಪೀಠಿಕೆಯಲ್ಲಿ ಅವರು ತಾವೇಕೆ ಈ ಪುಸ್ತಕವನ್ನು ತಾವೇಕೆ ಬರೆಯಬೇಕಾಯಿತು ಎಂಬ ವಿವರಣೆಯಿದೆ. ಇದು ಅವರ ಕಾಣ್ಕೆ ಮುತ್ಸದ್ದಿತನಗಳನ್ನು ಕಾಣಿಸುತ್ತದೆ:

""ಇಪ್ಪತ್ತು ವರ್ಷಗಳ ಹಿಂದೆ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು. ಇಂತಹ ಸರ್ಕಾರವು ಭಾರತಕ್ಕೆ ಹೊಸದು. ಬಾಲ್ಯಾವಸ್ಥೆಯಲ್ಲಿರುವ ಈ ಪ್ರಜಾಪ್ರಭುತ್ವದ ರಾಜ್ಯಸೂತ್ರಗಳನ್ನು ವಹಿಸಲು ತಮಗೆ ಯೋಗ್ಯತೆ ಇರಲಿ ಇಲ್ಲದಿರಲಿ, ಅನೇಕರು ಮುಂದೆ ಬರುತ್ತಿದ್ದಾರೆ. ಇದರಿಂದ ಅರಿತೋ ಅರಿಯದೆಯೋ ಅನೇಕ ತಪ್ಪುಗಳಾಗುತ್ತಿವೆ. ಪ್ರಜೆಗಳಿಗೆ ನಾವು ನಿರೀಕ್ಷಿಸಿದಷ್ಟು ಸುಖಸೌಕರ್ಯಗಳು ದೊರೆತಿಲ್ಲ. ಇಷ್ಟೇ ಅಲ್ಲ, ಅನೇಕ ಕಠಿಣ ಸಮಸ್ಯೆಗಳು ನಮ್ಮ ಮುಂದೆ ಎದ್ದು ನಿಂತಿವೆ. ಇದಕ್ಕಾಗಿ ನಾವು ಕುಗ್ಗುವುದು ಬೇಡ. ತಪ್ಪು ಮಾಡುವುದು ಮಾನವನ ಸ್ವಭಾವ. ಆದರೆ ಒಮ್ಮೆ ಮಾಡಿದ ತಪ್ಪನ್ನು ಅರಿತುಕೊಂಡು ಮುಂದೆ ತನ್ನ ಕಾರ್ಯನೀತಿಯನ್ನು ತಿದ್ದುಕೊಳ್ಳುವುದಾದರೆ ನಾವು ಉದ್ಧಾರವಾದೇವು. ಹಾಗಾಗಬೇಕೆಂಬುದು ಈ ಗ್ರಂಥದ ಆಶಯ."

ಇಲ್ಲಿರುವ ಯೋಗ್ಯತೆಯ ಪ್ರಶ್ನೆ, ರಾಜಪ್ರಭುತ್ವವಾದಿಯೊಬ್ಬನಿಗೆ ಡೆಮಾಕ್ರಸಿಯನ್ನು ಒಪ್ಪಿಕೊಳ್ಳುವಲ್ಲಿ ಹುಟ್ಟುವ ವಿಚಿತ್ರ ಶಂಕೆಯಂತಿದೆ. ರಾಜಸೇವಾಸಕ್ತ ಮನೋಭಾವದ ಇಮಾಮರಿಗೆ ಮೈಸೂರು ಸಂಸ್ಥಾನದ ಬಗ್ಗೆ ಇನ್ನಿಲ್ಲದ ಗೌರವ. ದೊರೆಗಳ ಮತ್ತು ದಿವಾನರ ಆಳ್ವಿಕೆಯ ಬಗ್ಗೆ ಅಪಾರ ಮೆಚ್ಚುಗೆ. ಅವರ ಕಾಲದ ಆಡಳಿತವೇ ಉತ್ತಮವಾಗಿತ್ತು, ಕರ್ನಾಟಕವನ್ನು ಅದು ಏಳಿಗೆಯ ಪಥದಲ್ಲಿ ನಡೆಸಿತು ಎಂದು ನಂಬಿಕೆ. ಸ್ವಾತಂತ್ರ್ಯ ಚಳುವಳಿಯ ಕಾರಣದಿಂದ ಮಹಾರಾಜರ ಆಳಿಕೆಯು ತಪ್ಪಿಹೋದ ಬಗ್ಗೆ ಗಾಢವಿಷಾದ. ಒಂದು ರಾಜಕೀಯ ಸಂಸ್ಕೃತಿಯಿಂದ ಇನ್ನೊಂದು ರಾಜಕೀಯ ಸಂಸ್ಕೃತಿಗೆ ಹೊರಳುವ ಹೊತ್ತಿನ ಸಂತಸ ವಿಷಾದ ನೋವು ಈ ಕೃತಿಯಲ್ಲಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕರೂ ಸಂದರೂ ಆದರೂ ಅವರಿಗೆ ಅದರಲ್ಲಿ ಏರ್ಪಟ್ಟ ಸ್ವತಂತ್ರ ಸರ್ಕಾರಗಳ ಬಗ್ಗೆ ಅಸಮಾಧಾನ. ಆಡಳಿತ ಪದ್ಧತಿಯ ಬದಲಾವಣೆಯ ಜತೆಗೆ ಜನರ ಜೀವನಕ್ರಮದಲ್ಲಿ ಆದ ಬದಲಾವಣೆಯ ಬಗ್ಗೆ ದುಗುಡ. ಇದನ್ನು ಅವರು ಬೇಸರದ ದನಿಯಲ್ಲಿ ಮತ್ತೆಮತ್ತೆ ನಿರೂಪಿಸುವರು:

ಅ. "ಈಗಿರುವ ಸ್ಥಿತಿಗೆ ಹೋಲಿಸಿದರೆ ಆಗಿನ ಮತದಾರರಲ್ಲಿ ನೀತಿಯ ಮಟ್ಟವು ಮೇಲ್ತರಗತಿಯದಾಗಿದ್ದಿತು. ಬಹುಜನರು ಯಾವ ಪ್ರತಿಫಲವನ್ನೂ ಅಪೇಕ್ಷಿಸುತ್ತಿರಲಿಲ್ಲ. ಲಂಚವನ್ನು ತೆಗೆದುಕೊಂಡು ಮತ ಕೊಡುವವರು ಬಹಳ ಕಡಿಮೆ ಇರುತ್ತಿದ್ದರು. ವೋಟು ಕೊಡುವುದಾಗಿ ವಾಗ್ದಾನ ಮಾಡಿದವರು ಕೊನೆಯವರೆಗೂ ಅದಕ್ಕೆ ಬದ್ಧರಾಗಿರುತ್ತಿದ್ದರು. ಕೋಮುವಾರು ಭಾವನೆಯು ಅತ್ಯಲ್ಪವಾಗಿದ್ದಿತು. ಮುಖ್ಯವಾಗಿ ವ್ಯಕ್ತಿಯ ಅರ್ಹತೆ ಮತ್ತು ದಕ್ಷತೆಯನ್ನು ಗಣನೆಗೆ ತೆಗೆದುಕೊಳ್ಳುತ್ತಿದ್ದರು."

ಆ. "ಅಮಲ್ದಾರರನ್ನಾಗಲಿ ಅಥವಾ ಅವರ ಮೇಲ್ಪಟ್ಟ ಅಧಿಕಾರಿಗಳನ್ನಾಗಲಿ ಭೇಟಿ ಮಾಡಲು ಹೋಗುವಾಗ ಕೋಟು, ಪೇಟ ಇಲ್ಲದೆ ಹೋಗುತ್ತಿರಲಿಲ್ಲ. ಸ್ಕೂಲು ಕಾಲೇಜು ವಿದ್ಯಾರ್ಥಿಗಳೂ ಕೋಟು ಟೋಪಿ ಧರಿಸದೆ ಸ್ಕೂಲು ಮತ್ತು ಕಾಲೇಜುಗಳಿಗೆ ಹೋಗುತ್ತಿರಲಿಲ್ಲ. ಈಗಿನ ಕಾಲದ ಯುವಕರು ವಿದ್ಯಾರ್ಥಿಗಳು ಟೋಪಿಗೂ ಕೋಟಿಗೂ ಬಹಿಷ್ಕಾರ ಹಾಕಿದಂತಿದೆ. ಆಫೀಸ್ಗಳಲ್ಲಿ ಬುಷ್ಕೋಟು ಸಾಮಾನ್ಯವಾಗಿ ಬಿಟ್ಟಿದೆ. ಸರಿಯಾದ ಉಡುಪು ಧರಿಸುವುದು ನಮಗೋಸ್ಕರವಲ್ಲ, ಇತರರನ್ನು ಗೌರವಿಸುವುದಕ್ಕಾಗಿ ಎಂಬ ಹಿಂದಿನ ಅಭಿಪ್ರಾಯ ಸಂಪೂರ್ಣ ನಾಶವಾಗಿರುತ್ತದೆ. ಭಾರತದಲ್ಲೆಲ್ಲ ಮಾನ್ಯತೆ ಪಡೆದಿದ್ದ ಪ್ರಸಿದ್ಧ ಮೈಸೂರು ಜರತಾರಿ ಪೇಟವು ದಿ. ವಿಶ್ವೇಶ್ವರಯ್ಯನವರೊಂದಿಗೆ ಮಾಯವಾಗಿ ಅವುಗಳ ಸ್ಥಾನದಲ್ಲಿ ನಾಲ್ಕಾಣೆ ಟೋಪಿಗಳು ಬಂದಿರುತ್ತವೆ."

ಇಲ್ಲಿ 'ನಾಲ್ಕಾಣೆ ಟೋಪಿ' ಎನ್ನುವಲ್ಲಿ ಒಂದು ಬಗೆಯ ತಾತ್ಸಾರದ ದನಿಯೂ ಇದೆ. ಪ್ರಜಾಪ್ರಭುತ್ವದ ಗುಣಗಳೇನೇ ಇರಲಿ, ಕಳೆದುಹೋದ ಮೈಸೂರು ರಾಜರ ದಿವಾನರ ಆಳಿಕೆಯೇ ಚೆನ್ನಾಗಿತ್ತು ಎಂಬ ಹಳಹಳಿಕೆ ಸಿಂಗ್ರಯ್ಯ, ವೆಂಕಟರಾಮಪ್ಪ ಮೊದಲಾದ ರಾಜಪ್ರಭುತ್ವಕ್ಕೆ ಸಂಬಂಧವಿದ್ದ ಬಹುತೇಕ ಲೇಖಕರಲ್ಲಿವೆ. ಸಾರ್ವಜನಿಕ ಚುನಾವಣೆಗಳಲ್ಲಿ ಆರಿಸಿಬಂದ ಕಾಂಗ್ರೆಸ್ ಸರ್ಕಾರದ ಆರ್ಥಿಕ ನೀತಿಗಳ ಬಗ್ಗೆ ಇಮಾಂ ಕಟುವಿಮರ್ಶೆ ಮಾಡುತ್ತಾರೆ. ಈ ನೀತಿಯನ್ನು ಅಂಕಿ ಅಂಶಗಳ ಸಹಾಯದಿಂದ ಆರ್ಥಿಕ ತಜ್ಞರಾಗಿ ವಿಶ್ಲೇಷಣೆ ನಡೆಸುತ್ತಾರೆ. ಸ್ವತಂತ್ರ ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಸೇರಿ ಮೈಸೂರು ತನ್ನ ಸ್ವತಂತ್ರ ಅಸ್ತಿತ್ವ ಮತ್ತು ಚಹರೆ ಕಳೆದುಕೊಂಡಿದ್ದರ ಬಗ್ಗೆ ಮತ್ತೆಮತ್ತೆ ಕೊರಗುತ್ತಾರೆ. ಈ ಕೊರಗು ಮತ್ತು ಹಳಹಳಿಕೆಗಳು, 1947ರ ಬಂದ ಪ್ರಜಾಪ್ರಭುತ್ವ ಮಾದರಿಯ ಸರ್ಕಾರದ ಒಳಿತುಗಳನ್ನು ಮುಕ್ತವಾಗಿ ಕಾಣುವುದಕ್ಕೆ ಬೇಕಾದ ಮನಸ್ಥಿತಿಯನ್ನೇ ಕಳೆದಿವೆ:

"ಬ್ರಿಟಿಶ್ ಇಂಡಿಯಾ ಸರ್ಕಾರದವರು ಮೈಸೂರಿನ ಒಳಾಡಳಿತದಲ್ಲಿ ಪ್ರವೇಶಿಸುತ್ತಿರಲಿಲ್ಲ. ಮೈಸೂರಿನ ಪ್ರಜೆಗಳ ಮೇಲೆ ತೆರಿಗೆಗಳನ್ನು ಹಾಕುತ್ತಿರಲಿಲ್ಲ. ಮೈಸೂರಿನಲ್ಲಿ ಪ್ರತ್ಯೇಕ ವರಮಾನ ತೆರಿಗೆ ಖಾತೆ ಇದ್ದಿತು. ಮೈಸೂರಿನ ಆಡಳಿತದಲ್ಲಿದ್ದ ಅಧಿಕಾರಿಗಳು ಮೈಸೂರಿನವರೇ ಆಗಿದ್ದರು. ಬ್ರಿಟಿಷ್ ಐಸಿಎಸ್ ಅಧಿಕಾರಿಗಳಿಗೆ ಇಲ್ಲಿ ಸ್ಥಾನವಿರಲಿಲ್ಲ. ಮೈಸೂರಿನ ಸಿವಿಲ್ ಸರ್ವಿಸ್ ಬೇರೆಯಾಗಿದ್ದಿತು. ಮೈಸೂರಿಗೆ ಆರ್ಥಿಕ ಮತ್ತು ಹಣಸಾಸಿನ ವಿಷಯವಾಗಿ ಸ್ವಾತಂತ್ರ್ಯವಿದ್ದಿತು. ಕೇಂದ್ರ ಸರ್ಕಾರದಿಂದ ನಮಗೆ ಯಾವ ಆರ್ಥಿಕ ಸಹಾಯವೂ ದೊರೆಯುತ್ತಿರಲಿಲ್ಲ. ನಾವು ಕೇಳುತ್ತಲೂ ಇರಲಿಲ್ಲ. ಮೈಸೂರಿನ ಆಡಳಿತವು ಉನ್ನತ ಮಟ್ಟದಲ್ಲಿದ್ದಿತು. ಆದರೆ ಅಧಿಕಾರವೆಲ್ಲಾ ಭಾರತದ ಸರ್ಕಾರದಲ್ಲಿ ಕೇಂದ್ರೀಕೃತವಾಗುತ್ತಾ ಬಂತು. ಮೈಸೂರಿನ ವ್ಯಕ್ತಿತ್ವ ಮತ್ತು ಘನತೆಗಳು ಭಾರತ ಸರ್ಕಾರವನ್ನು ಅನುಸರಿಸಿದ ನೀತಿಯಿಂದ ಮಾಯವಾಗುತ್ತಾ ಬಂದವು. ಮೈಸೂರಿನ ಸ್ವಯಂ ಆಡಳಿತಾಧಿಕಾರ ಮತ್ತು ಅದರ ವೈಶಿಷ್ಟ್ಯವು ಕಳೆದುಹೋದುದು ನನಗೆ ಬಹಳ ವ್ಯಸನವನ್ನುಂಟು ಮಾಡಿತು."

ಆದರೆ ಈ ವ್ಯಸನಕ್ಕೆ ಹೊಸ ಭಾರತ ಸರ್ಕಾರ ಅನುಸರಿಸಿದ ಕೇಂದ್ರೀಕರಣದ ವಿರುದ್ಧದ ಪ್ರತಿರೋಧದ ಮುಖವಿದೆ. ಪ್ರಾದೇಶಿಕ ಸ್ವಾಯತ್ತೆಗಳ ಪರವಾದ ಅಸ್ಮಿತೆಯ ಕಾಳಜಿಯೂ ಇದೆ. ಈಚೆಗೆ ಭಾರತದ ಒಕ್ಕೂಟದಲ್ಲಿ ಪ್ರತಿಷ್ಠಾಪನೆ ಆಗುತ್ತಿರುವ ಸರ್ಕಾರಗಳು ಹೇಗೆ ಪ್ರಾದೇಶಿಕ ಆಶೋತ್ತರಗಳನ್ನು ದಮನಿಸುತ್ತಿವೆ ಮತ್ತು ಭಾಷೆ ತೆರಿಗೆಗಳನ್ನು ಹೇರುತ್ತಿವೆ ಎನ್ನುವುದನ್ನು ನೋಡುವಾಗ, 60 ವರ್ಷಗಳ ಹಿಂದೆಯೇ, ಈ ಕುರಿತ ಎಚ್ಚರಿಕೆಯನ್ನು ಇಮಾಮರು ನೀಡಿದ್ದರು ಎಂದು ಅನಿಸುತ್ತದೆ. ಬದಲಾವಣೆಯನ್ನು ಒಪ್ಪಿಕೊಳ್ಳುತ್ತಲೇ ನಾಡಿನ ಒಳಿತನ್ನು ಹಾರೈಸುವ ಮಾತುಗಳೊಂದಿಗೆ ಕೃತಿ ಮುಗಿಯುತ್ತದೆ. ಮುತ್ಸದ್ದಿ ಮತ್ತು ಮುಂಗಾಣ್ಕೆಯುಳ್ಳ ವ್ಯಕ್ತಿ ಮಾತ್ರ ರಾಜಕೀಯ ತಾತ್ವಿಕ ಭಿನ್ನಮತಗಳಾಚೆ, ತನ್ನ ಸಮಾಜಕ್ಕೆ ತನ್ನ ದೇಶಕ್ಕೆ ಒಳಿತನ್ನು ಹಾರೈಸಬಲ್ಲಂತೆ ಈ ಮಾತುಗಳಿವೆ.

# ಶಾಲಾ ಪೂರ್ವ ಶಿಕ್ಷಣದಿಂದ ಮಕ್ಕಳ ಕಲಿಕೆಗೆ ಸಹಕಾರಿ

### ರೋಹಿಣಿ ಕೊಟಗಾರ ಹೇಳಿಕೆ | ಶಾಲಾಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮ




■ ಹಂಪಿ ಟೈಮ್ಸ್ ಕೊಪ್ಪಳ

ಶಾಲಾ ಪೂರ್ವ ಶಿಕ್ಷಣದಿಂದ ಮಕ್ಕಳ ಕಲಿಕೆಗೆ ಸಹಕಾರಿಯಾಗುತ್ತದೆ ಎಂದು ಕೊಪ್ಪಳ ಅಭಿವೃದ್ಧಿ ಯೋಜನಾಧಿಕಾರಿ ರೋಹಿಣಿ ಕೊಟಗಾರ ಹೇಳಿದರು.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರ್ಗಿ, ಜಿಲ್ಲಾಡಳಿತ ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕೊಪ್ಪಳ ಹಾಗೂ ಕಲಿಕೆ ಟಾಟಾ ಸಹಯೋಗದಲ್ಲಿ ಶಾಲಾ ಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮದಡಿ ಕೊಪ್ಪಳ ಶಿಶು ಅಭಿವೃದ್ಧಿ ಯೋಜನೆಯ ಕೊಪ್ಪಳ ಬಿ ವಲಯದ ಅಂಗನವಾಡಿ ಕಾರ್ಯ ಕರ್ತೆಯರಿಗೆ ಆಗಸ್ಟ್ 27 ರಂದು ನಗರದ ಗೌರಿ ಅಂಗಳದ ಸರ್ಕಾರಿ ಶಾಲೆಯಲ್ಲಿ ನಡೆದ 5ನೇ ಹಂತದ ಮೂರು ದಿನದ ಶಾಲಾ ಪೂರ್ವ ಶಿಕ್ಷಣ ತರಬೇತಿ ಕಾರ್ಯ ಕ್ರಮದಲ್ಲಿ ಮಾತನಾಡಿದರು.

ಶಾಲಾ ಪೂರ್ವ ಶಿಕ್ಷಣದಿಂದ ಮಕ್ಕಳ ಕಲಿಕೆಗೆ ಸಹಾಯವಾಗುತ್ತದೆ. ಪ್ರತಿ ಅಂಗನವಾಡಿ ಕೇಂದ್ರದಲ್ಲಿಯೂ, ಮಕ್ಕಳ ಭಾಷೆ ಬೌದ್ಧಿಕ ಬೆಳವಣಿಗೆಗೆ ಶಾಲಾ ಪೂರ್ವ ಶಿಕ್ಷಣವನ್ನು ಮಕ್ಕಳಿಗೆ ಕಲಿಸಬೇಕೆಂದು. ಈ ಹಿನ್ನೆಲೆಯಲ್ಲಿ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ತರಬೇತಿಯಲ್ಲಿ ಮಾಹಿತಿ ತಿಳಿದುಕೊಂಡು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು ತರಬೇತಿಯ ಸಾಮಗ್ರಿಗಳನ್ನು ವೀಕ್ಷಣೆ ಮಾಡಿದರು.

ಈ ಸಂದರ್ಭದಲ್ಲಿ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಶಿವಶರಣಪ್ಪ ಗದ್ದಿ, ಶಾಲಾ ಶಿಕ್ಷಣ ಇಲಾಖೆಯ ಜಿಲ್ಲಾ ತರಬೇತಿ ಕೇಂದ್ರ ಉಪನ್ಯಾಸಕರಾದ ಕೃಷ್ಣ, ಕಲಿಕೆ ಟಾಟಾ ಟ್ರಸ್ಟ್ ಕೊಪ್ಪಳ ಜಿಲ್ಲಾ ವ್ಯವಸ್ಥಾಪಕರಾದ ಅಶೋಕ್, ಹಿರಿಯ ಮೇಲ್ವಿಚಾರಕಿಯ ಜಯಶ್ರೀ ಕೂಲಿ, ಮೇಲ್ವಿಚಾರಕಿಯರಾದ ಭುವನೇಶ್ವರಿ ಹಾಗೂ ಕಮಲಾಕ್ಷಿ ಸೇರಿದಂತೆ ಶಾಲಾ ಶಿಕ್ಷಕರು ಉಪಸ್ಥಿತರಿದ್ದರು. ತರಬೇತಿಯಲ್ಲಿ 23 ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದ್ದರು.

# ಸೂರ್ಯಕಾಂತಿ ಉತ್ಪನ್ನ ಖರೀದಿ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಬೆಂಬಲ ಬೆಲೆ ಯೋಜನೆಯಡಿ ಪ್ರಸ್ತಕ ಸಾಲಿನ ಮುಂಗಾರು ಹಂಗಾಮಿನಲ್ಲಿ ಸೂರ್ಯಕಾಂತಿ ಉತ್ಪನ್ನವನ್ನು ಖರೀದಿಸಲಾಗುವುದು ಎಂದು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾ ಮಂಡಳಿ ನಿಯಮಿತ ಚಿತ್ರದುರ್ಗ, ಬಳ್ಳಾರಿಯ ವಿಭಾಗೀಯ ಕಚೇರಿ ವತಿಯಿಂದ ಎಫ್‌ಎಕ್ಯೂ ಗುಣಮಟ್ಟದ ಸೂರ್ಯಕಾಂತಿ ಉತ್ಪನ್ನವನ್ನು ಕೇಂದ್ರ ಸರ್ಕಾರ ನಿಗಧಿಪಡಿಸಿದ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ.7,280 ರಂತೆ ರೈತರಿಂದ ಖರೀದಿಸಲಾಗವುದು. ಈಗಾಗಲೇ ಖರೀದಿ ಕೇಂದ್ರಗಳನ್ನು ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಪ್ರಾರಂಭಿಸಲಾಗಿದೆ.

**ಖರೀದಿ ಕೇಂದ್ರಗಳ ವಿವರ:** ಬಳ್ಳಾರಿಯ ಎಪಿಎಂಸಿ ಯಾರ್ಡ್‌ನ ಎಪಿಎಂಸಿ ಆಡಳಿತ ಕಚೇರಿಯ ನಟರಾಜ ಹೊಸಮನಿ ಅವರ ಮೊ.9686513163 ಮತ್ತು ಶಿವಮೂರ್ತಿ.ಡಿ.ಹೆಚ್ ಅವರ ಮೊ.8722047273.

ಬಳ್ಳಾರಿ ತಾಲ್ಲೂಕಿನ ಕಪ್ಪಗಲ್ಲು ಗ್ರಾಮದ ಮಠದ ರಸ್ತೆಯ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘ ನಿಯಮಿತದ ಕಾರ್ಯದರ್ಶಿ ಈರೇಶ ಅವರ ಮೊ.7353155205. ಖರೀದಿ ಏಜೆನ್ಸಿಯು ಕೆಓಎಫ್ ಬಳ್ಳಾರಿ ಆಗಿರುತ್ತದೆ.

**ಬೇಕಾದ ದಾಖಲೆಗಳು:** 2024–25 ನೇ ಸಾಲಿನ ಪಹಣಿ ಪತ್ರ. ರೈತರು ತಮ್ಮ ಹೆಸರನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಿರಬೇಕು ಹಾಗೂ ಎಫ್‌ಐಡಿ ಪಡೆಯುವುದು ಕಡ್ಡಾಯ. ಆಧಾರ್ ಕಾರ್ಡ್, ಬ್ಯಾಂಕ್ ಖಾತೆ (ಆಧಾರದ ಕಾರ್ಡ್‌ನೊಂದಿಗೆ ಜೋಡಣೆಗೊಂಡ) ಪುಸ್ತಕದ ನಕಲು ಪ್ರತಿ. ಒಣಗಿದ ಹಾಗೂ ಸ್ವಚ್ಛ ಎಫ್.ಎ.ಕ್ಯೂ ಗುಣಮಟ್ಟದ ಸೂರ್ಯಕಾಂತಿ ಉತ್ಪನ್ನವನ್ನು ಕೇಂದ್ರಕ್ಕೆ ಮಾರಾಟಕ್ಕೆ ತರುವುದು. ಸೂರ್ಯಕಾಂತಿ ಖರೀದಿ ಕೇಂದ್ರಗಳಲ್ಲಿ ರೈತರು ತಮ್ಮ ಹೆಸರನ್ನು ಆ.24 ರಿಂದ 45 ದಿನಗಳೊಳಗೆ ನೋಂದಣಿ ಮಾಡಿಸಿ, ನೋಂದಣಿ ಚೀಟಿ ಪಡೆಯಬೇಕು.

ನಿಗಧಿತ ಅವಧಿಯೊಳಗೆ ನೋಂದಣಿಗೊಂಡ ರೈತರಿಂದ ಪ್ರತಿ ಎಕರೆಗೆ 03 (ಮೂರು) ಕ್ವಿಂಟಾಲ್ ಗರಿಷ್ಠ 15 (ಹದಿನೈದು) ಕ್ವಿಂಟಾಲ್ ಮಾತ್ರ ಖರೀದಿಸಲಾಗುವುದು. ಸೂರ್ಯಕಾಂತಿ ಉತ್ಪನ್ನವನ್ನು 90 ದಿನಗಳವರೆಗೆ ಖರೀದಿಸಲಾಗುವುದು. ಬೆಳಿಗ್ಗೆ 09 ಗಂಟೆಯಿಂದ ಸಾಯಂಕಾಲ 05 ಗಂಟೆಯವರೆಗೆ ಮಾತ್ರ ಖರೀದಿಸಲಾಗುವುದು. ಯಾವುದೇ ಸಂದರ್ಭದಲ್ಲಿ ರೈತರು ಮಧ್ಯವರ್ತಿಗಳ ಮೊರೆ ಹೋಗಬಾರದು. ಜಿಲ್ಲೆಯ ರೈತರು ಬೆಂಬಲ ಬೆಲೆ ಯೋಜನೆ ಸದುಪಯೋಗ ಪಡೆದುಕೊಳ್ಳಿ.

**ಕವಿ ಮನಸು**

## ಕಾಲವಾದವರು

ಆಗಿ ಹೋದವರು
ನೆನಪಿಗೆ ಬಂದರು
ಅವರು ದೂರ ಹೋದವರು
ಮಾತಾಡಲು ಸಿಗರು
ಸನಿಹಕೂ ಬರರು
ಅವರ ಜೀವಿತದ
ದಿನಗಳು ಕಂಡವು
ಕಾಲ ಎಂಥ ವಿಸ್ಮಯ!
ನೋಡ ನೋಡುತ
ಜಾರಿ ಹೋಗುತ್ತದೆ
ನೆನಪಲಿ ಕೆಲವರು ಬರುವರು
ಅವರು ಬಾಳಿದ ಆದರ್ಶ
ಕಣ್ಮುಂದೆ ಬರುತ್ತದೆ
ನಾವು ಕಾಲದಿಂದ ಜಾರುತ್ತೇವೆ
ಕಾಲದಲಿ ಇದ್ದವರ
ಹಲವರ ನೆನಪಲಿ
ನಾವೂ ಉಳಿಯುತ್ತೇವೆ.

– ಚಂದ್ರಶೇಖರಯ್ಯ ರೋಣದಮಠ

## ಸತ್ಯವೆ ಆಗಲಿ ನಿನ್ನುಸಿರು

ಅನುದಿನ ಪಾಠವ ಚಂದದಿ ಓದುತ
ಕಲಿಯಲು ಬೇಕಿದೆ ಆಸಕ್ತಿ
ಹಾಲನು ಕಾಯಿಸಿ ಕುಡಿಯಲು ನೀಡುವೆ
ಕೊಡುವುದು ದೇಹಕೆ ಅದು ಶಕ್ತಿ

ಬೆಳೆಯುತ ಬಾಳಲಿ ಮುಂದಕೆ ನೌಕರಿ
ಯಾವುದು ವೃತ್ತಿಯ ಆರಿಸುವೆ
ಏನೇ ಆಗಿರು ಸತ್ಯದ ಮಾರ್ಗದಿ
ಮನದಲಿ ಸಂತಸ ನಾ ಪಡುವೆ

ಮನವನು ಇರಿಸುತ ಪಾಠವ ಕಲಿತರೆ
ಬದುಕಲಿ ಯಶವನು ನೀ ಪಡೆವೆ
ಉತ್ತಮ ಹಾದಿಯ ಹಿಡಿಯುತ ನಡೆದರೆ
ದೇಶಕೆ ಹೆಮ್ಮೆಯ ನೀ ತರುವೆ

ದೀನರ ಕಂಡರೆ ಅಣಕಿಸಿ ಜರೆಯದೆ
ನೆರವನು ನೀಡುತ ಬಾಳುತಿರು
ಮಾಡುವ ಕಾರ್ಯದೆ ನಿಷ್ಠೆಯ ಹೊಂದಿರು
ಸತ್ಯವೆ ಆಗಲಿ ನಿನ್ನುಸಿರು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

**ಮೈಕ್ರೋ ನ್ಯೂಸ್**

## ಪೋಕ್ಸೋ ಆರೋಪಿಗೆ ದಂಡ ಸಹಿತ ಜೈಲು ಶಿಕ್ಷೆ

**ಹಂಪಿ ಟೈಮ್ಸ್ ಕೊಪ್ಪಳ**

ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಅಪಹರಿಸಿ, ಅತ್ಯಾಚಾರ ಎಸಗಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗೆ 20 ವರ್ಷಗಳ ಜೈಲು ಶಿಕ್ಷೆ ವಿಧಿಸಿ ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ ಹಾಗೂ ತ್ವರಿತ ವಿಲೇವಾರಿ ನ್ಯಾಯಾಲಯ(ಪೋಕ್ಸೋ) ತೀರ್ಪು ಪ್ರಕಟಿಸಿದೆ.

ಹನುಮಸಾಗರ ಪೊಲೀಸ್ ಠಾಣೆ ವ್ಯಾಪ್ತಿಯ ತುಗ್ಗಲದೋಣಿ ಬ್ರಿಡ್ಜ್ ಹತ್ತಿರ ದಿನಾಂಕ: 31-12-2019 ರಂದು ಭೀಮಪ್ಪ ಶಾಂತಗೇರಿ ಈತನು ಮೂರು ಮಕ್ಕಳ ತಂದೆಯಾಗಿದ್ದು, ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಕರೆಸಿಕೊಂಡು ಟಂಟಂ ವಾಹನದಲ್ಲಿ ಅಪಹರಿಸಿಕೊಂಡು ಬಾದಾಮಿ ರೈಲ್ವೆ ಸ್ಟೇಷನಗೆ ಹೋಗಿ ಅಲ್ಲಿಂದ ಸೋಲಾಪುರ, ಸಿಕಿಂದ್ರಾಬಾದ ಹೋಗಿ ಅಲ್ಲಿನ ಸಾಯಿಕೃಷ್ಣ ಲಾಡ್ಜನ ರೂಮವೊಂದರಲ್ಲಿ ಅತ್ಯಾಚಾರ ಎಸಗಿದ್ದು ಅಲ್ಲದೇ ಈ ಹಿಂದೆ ಕೂಡ ಸವಡಿ ಗ್ರಾಮದ ಸೀಮಾದ ಜಮೀನನಲ್ಲಿ ಅಪ್ರಾಪ್ತೆಗೆ ಅತ್ಯಾಚಾರ ಎಸಗಿದ ಆರೋಪದ

ಹಿನ್ನಲೆಯಲ್ಲಿ ಹನುಮಸಾಗರ ಪಿಎಸ್ಐ ಅಮರೇಶ ಹುಬ್ಬಳ್ಳಿ ಅವರು ಈ ಪ್ರಕರಣ ದಾಖಲಿಸಿಕೊಂಡು ಪ್ರಕರಣದ ತನಿಖೆಯನ್ನು ಕುಷ್ಟಗಿ ಗ್ರಾಮೀಣ ವೃತ್ತದ ಸಿಪಿಐ ಚಂದ್ರಶೇಖರ.ಜಿ ಅವರು ನಿರ್ವಹಿಸಿ ತನಿಖೆಯಲ್ಲಿ ಆರೋಪಿತನ ಮೇಲಿನ ಆರೋಪಣೆಗಳು ಮೇಲ್ನೋಟಕ್ಕೆ ಸಾಬೀತಾದ್ದರಿಂದ ಆರೋಪಿತನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣವು ಸ್ಪೆ.ಎಸ್‌ಸಿ(ಪೋಕ್ಸೋ) ಸಂ: 03/2020 ರಲ್ಲಿ ದಾಖಲಾಗಿದ್ದು, ವಿಚಾರಣೆಯನ್ನು ನಡೆಸಿದ ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತವಿಲೇವಾರಿನ್ಯಾಯಾಧೀಶರಾದ(ಪೋಕ್ಸೋ) ಕುಮಾರ ಡಿ.ಕೆ. ಅವರು, ಆರೋಪಿ ಭೀಮಪ್ಪ ಶಾಂತಗೇರಿ ಮೇಲಿನ ಆರೋಪಣೆಗಳು ಸಾಬೀತಾಗಿವೆ ಎಂದು 20 ವರ್ಷಗಳ ಜೈಲು ಶಿಕ್ಷೆ ಹಾಗೂ ರೂ.25,000 ಗಳ ದಂಡವನ್ನು ಭರಿಸುವಂತೆ ದಿನಾಂಕ 24-08-2024 ರಂದು ಆದೇಶಿಸಿ ತೀರ್ಪು ಪ್ರಕಟಿಸಿದ್ದಾರೆ. ಈ ಪ್ರಕರಣದಲ್ಲಿ ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ ಗೌರಮ್ಮ ದೇಸಾಯಿ ಅವರು ವಾದ ಮಂಡಿಸಿದ್ದರು ಎಂದು ನ್ಯಾಯಾಲಯದ ಪ್ರಕಟಣೆ ತಿಳಿಸಿದೆ.

### ಭಾರತೀಯ ಕ್ರೀಡಾಪಟುಗಳ ಸಂಭ್ರಮದ ಹಬ್ಬ ರಾಷ್ಟ್ರೀಯ ಕ್ರೀಡಾ ದಿನ

# ದೇಶದೆಲ್ಲೆಡೆ ಧ್ಯಾನ್‌ಚಂದ್‌ರ ಧ್ಯಾನ

ಇಂದು ಹಾಕಿ ಮಾಂತ್ರಿಕ ಮೇಜರ್ ಧ್ಯಾನ್ ಚಂದ್ ಅವರ ಹುಟ್ಟುಹಬ್ಬದ ದಿನ. ಆಗಸ್ಟ್ 29 ರಾಷ್ಟ್ರೀಯ ಕ್ರೀಡಾ ದಿನವನ್ನು ಭಾರತದೆಲ್ಲಡೆ ಸಂಭ್ರಮದಿಂದ ಆಚರಿಸುತ್ತೇವೆ. ಭಾರತ ಸರ್ಕಾರ 2012 ರಂದು ಈ ದಿನವನ್ನು ಭಾರತದ ರಾಷ್ಟ್ರೀಯ ಕ್ರೀಡಾ ದಿನವೆಂದು ಘೋಷಿಸಿದೆ. ಭಾರತೀಯ ಮತ್ತು ಅಂತರಾಷ್ಟ್ರೀಯ ಹಾಕಿಯಲ್ಲಿ, ಮೇಜರ್ ಧ್ಯಾನ್ ಚಂದ್ ಅವರು ಮರೆಯದ ಮಾಣಿಕ್ಯವಾಗಿ ಇತಿಹಾಸದ ಪುಟಗಳಲ್ಲಿ ಹಸಿರಾಗಿದ್ದಾರೆ.

1928,1932, ಮತ್ತು 1936 ರ ಬೇಸಿಗೆ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಒಲಿಂಪಿಕ್ ಹ್ಯಾಟ್ರಿಕ್ ಸಾಧನೆಯಲ್ಲಿ ಇವರ ಪಾತ್ರ ಹಿರಿದು. ಇವರನ್ನು ಪ್ರೀತಿಯಿಂದ "ಚಾಂದ್"ಎಂದು ಕರೆಯಲಾಗುತ್ತಿತ್ತು ಕಾರಣ ಅವರು ತಮ್ಮ ನಿಯಮಿತ ದಿನದ ಕೆಲಸದ ನಂತರ ರಾತ್ರಿ ಚಂದ್ರನ ಬೆಳದಿಂಗಳಲ್ಲಿ ಹಾಕಿ ಅಭ್ಯಾಸ ಮಾಡುತ್ತಿದ್ದರು ಹಾಗಾಗಿ ಚಾಂದ್ ಎಂಬ ಹೆಸರು ಬಂದಿತು. ಅವರ ಸಾಹಸ ಮತ್ತು ಸಮಾಜದ ಮೇಲೆ ಬೀರಿದ ಪರಿಣಾಮಕಾರಿ ಪ್ರಭಾವಗಳ ಮತ್ತು ಅಸಾಧಾರಣ ಸಾಧನೆಗಳ ನೆನಪಿನ ದಿನವಾಗಿದೆ. ಕ್ರೀಡಾ ಲೋಕದಲ್ಲಿ ಅಚ್ಚಳಿಯದ ಛಾಪು ಮೂಡಿಸಿದ ಕ್ರೀಡಾಪಟುಗಳಿಗೆ ಈ ದಿನ ಗೌರವ ಸಲ್ಲಿಸಲಾಗುತ್ತದೆ.

ರಾಷ್ಟ್ರೀಯ ಕ್ರೀಡಾ ದಿನ 2024

ಅಥ್ಲೆಟಿಸಮ್, ಟೀಮ್‌ವರ್ಕ್ ಮತ್ತು ಕ್ರೀಡಾ ಮನೋಭಾವದ ರಾಷ್ಟ್ರವ್ಯಾಪಿ ಆಚರಣೆಯಾಗಿದೆ. ಈ ಕ್ರೀಡಾ ದಿನದ ಇತಿಹಾಸವನ್ನು ನೋಡುವುದಾದರೆ ಆಗಸ್ಟ್ 29, 1905 ರಂದು ಭಾರತದ ಅಲಹಾಬಾದ್‌ನಲ್ಲಿ ಕುಶ್ವಾಹ ರಜಪೂತ ಕುಟುಂಬದಲ್ಲಿ ಧ್ಯಾನ್ ಚಂದ್ ರವರು ಜನಿಸಿದರು. ತಂದೆ ರಾಮೇಶ್ವರ್ ಸಿಂಗ್ ಮತ್ತು ತಾಯಿ ಶಾರದ ಮೂಲ್ ಸಿಂಗ್ ಮತ್ತು ರೂಪ್ ಸಿಂಗ್ ಧ್ಯಾನ್ ಚಂದ್ ಅವರ ಇಬ್ಬರು ಸಹೋದರರು ಹಾಗೂ ಹಾಕಿ ಆಟಗಾರರೂ ಸಹ,ಫೀಲ್ಡ್ ಹಾಕಿಯಲ್ಲಿ ಭಾರತಕ್ಕಾಗಿ ಸ್ಪರ್ಧಿಸಿದರು ಮತ್ತು 1932 ಮತ್ತು 1936 ರ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕಗಳನ್ನು ಗಳಿಸಿರುತ್ತಾರೆ ಇವರ ತಂದೆ ಬ್ರಿಟಿಷ್ ಇಂಡಿಯನ್ ಆರ್ಮಿಯಲ್ಲಿ ಸೇವೆ ಸಲ್ಲಿಸಿದ್ದು, ಇವರು ಸಹ ಹಾಕಿ ತಂಡದ ಸದಸ್ಯರಾಗಿದ್ದರು. ಚಾಂದ್ ಅವರ ಅಸಾಧಾರಣ ಬಾಲ್-ಹ್ಯಾಂಡ್ಲಿಂಗ್ ಮತ್ತು ಗೋಲ್-ಸ್ಕೋರಿಂಗ್ ಕೌಶಲ್ಯಗಳಿಗೆ ಹೆಸರುವಾಸಿಯಾಗಿದ್ದರು.



ಡಾ.ಸುಧಾಕರ ಜೆ.ಲಕ್ಕವಳ್ಳಿ
ಲೇಖಕರು 8747969381
Scan For Digital Colourful
HAMPI TIMES E-paper

1928 ಮತ್ತು 1964 ರ ನಡುವೆ ನಡೆದ ಎಂಟು ಒಲಿಂಪಿಕ್ಸ್‌ಗಳಲ್ಲಿ ಅವರ ಪ್ರಭಾವವನ್ನು ಕಾಣಬಹುದು, ಭಾರತವು ಏಳು ಬಾರಿ ಫೀಲ್ಡ್ ಹಾಕಿ ಸ್ಪರ್ಧೆಯನ್ನು ಗೆದ್ದಿದೆ ಅಂದಾಜು ಅವರು ಅಂತರಾಷ್ಟ್ರೀಯ ವೃತ್ತಿಜೀವನದಲ್ಲಿ 185 ಪಂದ್ಯಗಳಲ್ಲಿ 570 ಗೋಲುಗಳನ್ನು ಗಳಿಸಿದ್ದರು.



1956 ರಲ್ಲಿ ಭಾರತ ಸರ್ಕಾರವು ಭಾರತದಲ್ಲಿ ಮೂರನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ ಹಾಗೂ ಅದೇ ವರ್ಷ ಅವರು ಮೇಜರ್ ಶ್ರೇಣಿಯೊಂದಿಗೆ ಸೈನ್ಯದಿಂದ ನಿವೃತ್ತರಾದರು. ಅವರ ಜನ್ಮದಿನವನ್ನು ಗುರುತಿಸಲು, ಭಾರತವು 2012 ರಲ್ಲಿ ರಾಷ್ಟ್ರೀಯ ಕ್ರೀಡಾ ದಿನವನ್ನು ಸ್ಥಾಪಿಸಿತು.

ಈ ಆಚರಣೆಯ ಗುರಿಗಳು ಕ್ರೀಡಾ ನಾಯಕನಿಗೆ ಗೌರವ ಸಲ್ಲಿಸುವುದು ಮತ್ತು ದೈಹಿಕ ಸಾಮರ್ಥ್ಯ ಮತ್ತು ಯೋಗ ಕ್ಷೇಮಕ್ಕೆ ಒತ್ತು ನೀಡುವ ಮೂಲಕ ದೈನಂದಿನ ಜೀವನದಲ್ಲಿ ಕ್ರೀಡೆಯ ಮೌಲ್ಯದ ಬಗ್ಗೆ ಸಾರ್ವಜನಿಕ ಜಾಗೃತಿ ಮೂಡಿಸುವುದು. ಈ ದಿನದಂದು,ಪ್ರಮುಖ ಕ್ರೀಡಾ ತಾರೆಗಳು ಭಾರತದ ರಾಷ್ಟ್ರಪತಿಗಳಿಂದ ಖೇಲ್ ರತ್ನ, ಅರ್ಜುನ,ದ್ರೋಣಾಚಾರ್ಯ ಮತ್ತು ಧ್ಯಾನ್ ಚಂದ್ ಪ್ರಶಸ್ತಿಗಳಂತಹ ಪ್ರಮುಖ ಪ್ರಶಸ್ತಿಗಳನ್ನು ಭಾರತ ಸರ್ಕಾರದಿಂದ ಸ್ವೀಕರಿಸುತ್ತಾರೆ.

ಆಗಸ್ಟ್ 29 ಏಕಿಷ್ಟು ಮಹತ್ವವನ್ನು ಪಡೆದುಕೊಂಡಿದೆ ಎಂದರೆ ಪ್ರತಿ ವರ್ಷ ಆಗಸ್ಟ್ 29 ರಂದು, ಈ ದಿನ ಜನಿಸಿದ ಮೇಜರ್ ಧ್ಯಾನ್ ಚಂದ್ ಅವರ ಗೌರವಾರ್ಥವಾಗಿ ಭಾರತವು ರಾಷ್ಟ್ರೀಯ ಕ್ರೀಡಾ ದಿನವನ್ನು ಆಚರಿಸುತ್ತದೆ. ಧ್ಯಾನ್ ಚಂದ್ ಅವರು ಡಿಸೆಂಬರ್ 3, 1979 ರಂದು ದೈವಾಧೀನರಾದರು. ರಾಷ್ಟ್ರೀಯ ಕ್ರೀಡಾ ದಿನದಂದು, ನಾವು ಭಾರತೀಯ ಕ್ರೀಡಾಪಟುಗಳ ಸಾಧನೆಗಳನ್ನು ಗೌರವಿಸಲಾಗುತ್ತದೆ ಮತ್ತು ನಮ್ಮ ಸಂಸ್ಕೃತಿಯಲ್ಲಿ ಕ್ರೀಡೆಯ ಮೌಲ್ಯದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಹೆಚ್ಚುವರಿಯಾಗಿ,ಇದು ಮೇಜರ್ ಧ್ಯಾನ್ ಚಂದ್ ಅವರ ಪರಂಪರೆ ಮತ್ತು ಭಾರತೀಯ ಕ್ರೀಡೆಗಳಿಗೆ ಅವರ ಬದ್ಧತೆಯನ್ನು ಗೌರವಿಸುವ ದಿನವಾಗಿದೆ. ರಾಷ್ಟ್ರೀಯ ಕ್ರೀಡಾ ದಿನದಂದು ರಾಷ್ಟ್ರದಾದ್ಯಂತ ಹಲವಾರು ಕ್ರೀಡಾ ಚಟುವಟಿಕೆಗಳು ನಡೆಯುತ್ತವೆ.

ವಯಸ್ಸು,ಲಿಂಗ ಅಥವಾ ಸಾಮರ್ಥ್ಯದ ಮಟ್ಟವನ್ನು ಲೆಕ್ಕಿಸದೆ ಎಲ್ಲರೂ ಭಾಗವಹಿಸಿ ಸಂಭ್ರಮಿಸುತ್ತಾರೆ. ಕ್ರೀಡೆಗಳಲ್ಲಿ ಭಾಗವಹಿಸಲು ಜನರನ್ನು ಪ್ರೋತ್ಸಾಹಿಸುವುದು ಮತ್ತು ಆರೋಗ್ಯಕರ ಮತ್ತು ಸಕ್ರಿಯ ಜೀವನಶೈಲಿಯನ್ನು ಉತ್ತೇಜಿಸುವುದು ಇದರ ಪ್ರಮುಖ ಗುರಿಯಾಗಿದೆ.

ರಾಷ್ಟ್ರೀಯ ಕ್ರೀಡಾ ದಿನದಂದು, ಪ್ರಧಾನ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿಗಳನ್ನು ಭಾರತದ ಅಸಾಧಾರಣ ಸಾಧನೆ ಮಾಡಿದ ಕ್ರೀಡಾ ಸಾಧಕ ಕ್ರೀಡಾಪಟುಗಳಿಗೆ ರಾಷ್ಟ್ರಪತಿಗಳು ಪ್ರದಾನ ಮಾಡುತ್ತಾರೆ ಇದು ಭಾರತೀಯ ಕ್ರೀಡೆಗಳಲ್ಲಿ ಶ್ರೇಷ್ಠ ಗೌರವವಾಗಿದೆ. ಈ ದಿನವು ಕ್ರೀಡಾ ಮನೋಭಾವ ಮತ್ತು ದೈಹಿಕ ಸಾಮರ್ಥ್ಯದ ಪ್ರಾಮುಖ್ಯತೆಯ ಆಚರಣೆಯಾಗಿದ್ದು ಎಲ್ಲರನ್ನು ಒಗ್ಗೂಡಿಸುವ,ನಮ್ಮ ಕ್ರೀಡಾಪಟುಗಳನ್ನು ಬೆಂಬಲಿಸುವ ಮತ್ತು ಮುಂಬರುವ ಪೀಳಿಗೆಯ ಕ್ರೀಡಾ ವೀರರನ್ನು ಪ್ರೇರೇಪಿಸುವ ಸಮಯವಾಗಿದೆ.

ಈ ದಿನದ ಆಚರಣೆಗೆ ಸಾಕಷ್ಟು ಮಹತ್ವವಿದೆ ದೈನಂದಿನ ಜೀವನದಲ್ಲಿ ಕ್ರೀಡೆ ಮತ್ತು ದೈಹಿಕ ಚಟುವಟಿಕೆಯ ಪ್ರಾಮುಖ್ಯತೆಯನ್ನು ಈ ದಿನದಂದು ಎತ್ತಿ ತೋರಿಸಲಾಗುತ್ತದೆ. ಭಾರತದಲ್ಲಿ ಮೊದಲ ಬಾರಿಗೆ 2012 ರಲ್ಲಿ ರಾಷ್ಟ್ರೀಯ ಕ್ರೀಡಾ ದಿನವನ್ನು ಆಚರಿಸಿದಾಗಿನಿಂದ,ಸರ್ಕಾರವು ಈ ಸಂದರ್ಭದಲ್ಲಿ ಕ್ರೀಡಾ-ಸಂಬಂಧಿತ ಉಪಕ್ರಮಗಳ ಒಂದು ಶ್ರೇಣಿಯನ್ನು ಘೋಷಿಸಿದೆ. ನಮ್ಮ ಜೀವನದಲ್ಲಿ ಕ್ರೀಡೆಯ ಮಹತ್ವವನ್ನು ಆಚರಿಸಲು ಮತ್ತು ಮೇಜರ್ ಧ್ಯಾನ್ ಚಂದ್ ಅವರ ಪರಂಪರೆಗೆ ಗೌರವ ಸಲ್ಲಿಸಲು, ರಾಷ್ಟ್ರೀಯ ಕ್ರೀಡಾ ದಿನವನ್ನು ಆಚರಿಸಲಾಗುತ್ತದೆ.

ಅರ್ಜುನ ಪ್ರಶಸ್ತಿ ಮತ್ತು ಧ್ಯಾನ್ ಚಂದ್ ಪ್ರಶಸ್ತಿ ಸೇರಿದಂತೆ ಹಲವಾರು ಗೌರವಗಳನ್ನು ಕ್ರೀಡಾ ವೀರರಿಗೆ ಕ್ರೀಡೆಗೆ ಅವರ ಕೊಡುಗೆಗಳನ್ನು ಗುರುತಿಸಲು ನೀಡಲಾಗುತ್ತದೆ. ಕ್ರೀಡೆಯ ಮೂಲಕ ಗಳಿಸಿದ ಯಶಸ್ಸಿನ ಸಂತೋಷವನ್ನು ಹಂಚಿಕೊಳ್ಳಬಹುದು ಜೀವನದ ಎಲ್ಲಾ ಹಂತಗಳ ಜನರು ಕ್ರೀಡೆಗಳ ಮೂಲಕ ಸ್ನೇಹ ಸಂಪರ್ಕ ಸಾಧಿಸಬಹುದು.

2024 ರಾಷ್ಟ್ರೀಯ ಕ್ರೀಡಾ ದಿನದ ಮುಖ್ಯ ಧ್ಯೇಯ 'ಪ್ರವರ್ತನೆ ಮತ್ತು ಶಾಂತಿಯುತ ಮತ್ತು ಅಂತರ್ಗತ ಸಮಾಜಗಳಿಗಾಗಿ ಕ್ರೀಡೆ ' ಆಗಿದೆ. ಅಥ್ಲೆಟಿಕ್ಸ್ ಹೇಗೆ ಸಾಮಾಜಿಕ ಬಂಧಗಳನ್ನು ಬಲಪಡಿಸುತ್ತದೆ, ವ್ಯಕ್ತಿಗಳನ್ನು ಒಂದುಗೂಡಿಸುತ್ತದೆ ಮತ್ತು ಸಮುದಾಯಗಳಿಗೆ ಒಳಗೊಳ್ಳುವಿಕೆ ಮತ್ತು ಶಾಂತಿಯನ್ನು ಉತ್ತೇಜಿಸಲು ಅಗತ್ಯವಿರುವ ಸಾಧನಗಳನ್ನು ಹೇಗೆ ನೀಡುತ್ತದೆ ಎಂಬುದನ್ನು ಈ ಥೀಮ್ ಎತ್ತಿ ತೋರಿಸುತ್ತದೆ.

ನಾವೆಲ್ಲರೂ ಕ್ರೀಡಾ ಪ್ರೇಮಿಗಳೇ ಕೆಲವರು ಕ್ರೀಡಾಪಟುಗಳು ಇರಬಹುದು, ಕ್ರೀಡೆಯಲ್ಲಿ ಹೇಳಿಕೊಳ್ಳುವಂತಹ ಸಾಧನೆ ಮಾಡಿರಬಹುದು ಅಥವಾ ಮಾಡದೇ ಇರಬಹುದು. ಆದರೆ ಒಲಂಪಿಕ್ ನಲ್ಲಿ ನಮ್ಮೆಲ್ಲರಿಗೂ ಪದಕಗಳು ಗೆಲ್ಲಬೇಕೆಂಬ ಆಸೆ. ಕ್ರೀಡಾ ದಿನಾಚರಣೆಯನ್ನು ಆಚರಿಸುವುದು ಒಳ್ಳೆಯದೇ ಆದರೆ ಅದು ನೆಪ ಮಾತ್ರವಾಗದೆ ಅವುಗಳ ಅನುಷ್ಠಾನವಾಗಬೇಕು ಆ ದೃಷ್ಟಿಯಲ್ಲಿ ಸರ್ಕಾರಗಳು ಎಲ್ಲಾ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರನ್ನು ನೇಮಕ ಮಾಡಿ ಕ್ರೀಡಾಪಟುಗಳನ್ನು ಹಾಗೂ ಸದೃಢ, ಸ್ವಸ್ಥ ಆರೋಗ್ಯಯುತ ಸಮಾಜವನ್ನು ಕಟ್ಟುವಲ್ಲಿ ಸಹಕರಿಸಬೇಕು ಪ್ರತಿಯೊಬ್ಬರು ಕೈಜೋಡಿಸಬೇಕು. ಎಲ್ಲರಿಗೂ "ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಶುಭಾಶಯಗಳು"

# ಸ್ಲಂನಿಂದ ಜಾನಪದ ವಿವಿಯ ಸಿಂಡಿಕೇಟ್ ಸದಸ್ಯೆಯಾಗುವ ತನಕ ಸಹನಾ ಪಿಂಜಾರ ಪಯಣ

**■ ಅರುಣ್ ಜೋಳದ ಕೂಡ್ಲಿಗಿ**

ಮೈಸೂರಿನ ಕುವೆಂಪು ನಗರದ ಕರ್ನಾಟಕ ಪಬ್ಲಿಕ್ ಪ್ರೌಢಶಾಲೆಯ ಮಕ್ಕಳು ಅಭಿನಯಿಸಿದ 'ಪ್ಲೇಬ್ಯಾಕ್ ಥಿಯೇಟರ್' ರಂಗಪ್ರಯೋಗ 2020 ರ ಜನವರಿಯಲ್ಲಿ ರಂಗಾಸಕ್ತರ ಗಮನ ಸೆಳೆಯಿತು. ಇಂಡಿಯಾ ಫೌಂಡೇಷನ್ ಫಾರ್ ದ ಆರ್ಟ್ಸ್ ಸಂಸ್ಥೆಯ ಕಲಿಕಲಿಸು ಯೋಜನೆಯಡಿ ರಂಗಕರ್ಮಿ ರಿಯಾಜ್ ಸಿಹಿಮೊಗೆ ಮಕ್ಕಳಿಗೆ ತರಬೇತಿಗೊಳಿಸಿದ್ದರು.



ನಾಟಕ ಮಾಡಲು ಸಿದ್ಧವಿದ್ದ ಕಲಾವಿದರು ರಂಗಕ್ಕೆ ಬರುತ್ತಾರೆ, ನಾಟಕ ನೋಡಲು ಬಂದ ಪ್ರೇಕ್ಷಕರು ಅವರದ್ದೇ ಕಥೆ ಅಥವಾ ಘಟನೆಗಳನ್ನು ಹೇಳುತ್ತಾರೆ. ಪ್ರೇಕ್ಷಕರದೇ ಕಥೆ, ಘಟನೆಗಳನ್ನಿಟ್ಟುಕೊಂಡು ಸ್ಟೇಜಲ್ಲಿಯೇ ಕಲಾವಿದರು ಅಭಿನಯ ಮಾಡುತ್ತಾರೆ, ಇದು ನ್ಯೂಯಾರ್ಕ್ ಮೂಲದ 'ಪ್ಲೇಬ್ಯಾಕ್ ಥಿಯೇಟರ್' ಕಲ್ಪನೆಯ ಕನ್ನಡದ ಪ್ರಯೋಗ. ಈ ಪ್ರಯೋಗದ ಯಶಸ್ಸಿನ ಹಿಂದೆ ರಿಯಾಜ್ ಸಿಹಿಮೊಗೆಯ ಸಂಗಾತಿ ಸಹನಾ ಪಿಂಜಾರ ಇವರ ಕಲ್ಪನೆ ಮತ್ತು ನವೀನ ವಸ್ತ್ರವಿನ್ಯಾಸದ ಹೊಸತನವಿತ್ತು. ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾನಿಲಯದಲ್ಲಿ 'ಸಮಕಾಲೀನ ಕನ್ನಡ ರಂಗಭೂಮಿಯಲ್ಲಿ ರಂಗವಿನ್ಯಾಸ'ದ ಕುರಿತು ಪಿಹೆಚ್ ಡಿ ಪಡೆದ ಸಹನ ಇದೀಗ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯಲ್ಲಿ ಪ್ರದರ್ಶನ ಕಲಾ ವಿಭಾಗದಲ್ಲಿ ಅತಿಥಿ ಪ್ರಾಧ್ಯಾಪಕಿಯಾಗಿ ಮಕ್ಕಳಿಗೆ ರಂಗಭೂಮಿಯ ಪಾಠ ಹೇಳುತ್ತಿದ್ದಾರೆ. ಸಹನಾ ರಂಗಭೂಮಿಯ ಬಗೆಗೆ ತಾಜಾ ಅನ್ನಿಸುವ ಹೊಸ ಕಲ್ಪನೆಗಳನ್ನಿಟ್ಟುಕೊಂಡ ಕನಸುಗಾರ್ತಿ.

ಬಿರುಬಿಸಿಲ ಬಳ್ಳಾರಿಯ ಪರಿಸರದಲ್ಲಿ ರೂಪುಗೊಂಡ ಸಹನಾರ ರಂಗಭೂಮಿಯ ಪಯಣ ಕುತೂಹಲಕಾರಿಯಾಗಿದೆ. ಕಳೆದ ಮೂರು ದಶಕದಿಂದ ಹೊಸಪೇಟೆಯ ಅಜಾದ್ ನಗರದ ಸ್ಲಂನಲ್ಲಿ ಹಿರಿಯ ರಂಗಕರ್ಮಿ ಅಬ್ದುಲ್ ಅವರು ರೂಪಿಸಿದ 'ಭಾವೈಕ್ಯತಾ ವೇದಿಕೆ'ಯಲ್ಲಿ ಸಹನಾ ರೂಪುಗೊಳ್ಳುತ್ತಾರೆ.

ಬಾಲ್ಯದಲ್ಲಿಯೇ ಬೀದಿನಾಟಕಗಳ ಮೂಲಕ ರಂಗಪ್ರವೇಶ ಮಾಡಿದ ಸಹನಾ, 'ನೀರು ಕೊಡಿ' ಎಂಬ ಘೋಷಣೆ ಕೂಗಿದಾಗ, ಕೊಳಗೇರಿಗಳ ಹೆಣ್ಣು ಓದಲೇಬೇಕು ಎಂದು ಪ್ರಭುತ್ವದ ಎದುರು ನಿಂತು ಕೇಳಿದಾಗ ಅವರ ವಯಸ್ಸು ಕೇವಲ ಐದು. ಸಹನಾ ಬಳ್ಳಾರಿ ಜಿಲ್ಲೆ, ಕುರುಗೋಡು ತಾಲ್ಲೂಕಿನ ಎಚ್. ವೀರಾಪುರದ ಪಿ.ಬಾಲೇಸಾಬ್ ಮತ್ತು ಗೌರಿಬೀಯರ ಮಗಳು. ಬಾಲ್ಯದಲ್ಲಿಯೇ ಇವರ ಚುರುಕುತನ ಮತ್ತು ಮಾತುಗಾರಿಕೆ ಕಂಡ ಮಾಮ ಪಿ.ಅಬ್ದುಲ್ ಸಹನಾರಿಗೆ ರಂಗಭೂಮಿಯ ದೀಕ್ಷೆ ಕೊಟ್ಟರು. ಇಡೀ ಜಿಲ್ಲೆಯಾದ್ಯಂತ ಬೀದಿನಾಟಕ ಆಡಿಸಿದರು. ಅವರ ಎಲ್ಲ ನಾಟಕಗಳಲ್ಲಿ ಬಾಲಕಿ ಸಹನಾರದ್ದೇ ಮುಖ್ಯಪಾತ್ರ.



ಹೊಸಪೇಟೆಯ ವಿಜಯನಗರ ಕಾಲೇಜಿನಲ್ಲಿ ಪ್ರಥಮ ಪಿಯುಸಿ ಇದ್ದಾಗೊಮ್ಮೆ ನೀನಾಸಂನ ಕೆ.ವಿ.ಸುಬ್ಬಣ್ಣ ಹಂಪಿಗೆ ಬಂದಿದ್ದರು. ಭಾವೈಕ್ಯತಾ ವೇದಿಕೆಯ ರಂಗಚಟುವಟಿಕೆಯನ್ನು ಮೆಚ್ಚಿದ ಸುಬ್ಬಣ್ಣ ಸಹನಾರಿಗೆ ನೀನಾಸಂಗೆ ಬರುವಂತೆ ಸೂಚಿಸಿದರು. ಯಾವುದೇ ಸಂದರ್ಶನವಿಲ್ಲದೆ ನೀನಾಸಂ ಪ್ರವೇಶ ಪಡೆದರು. ಬಿ.ವಿ.ಕಾರಂತರು ನೀನಾಸಂಗೆ ಕೊನೆಯದಾಗಿ ನಿರ್ದೇಶಿಸಿದ ಅಂದೇರ್ ನಗರಿ ಚೌಪಟ್ ರಾಜ ನಾಟಕದಲ್ಲಿ ಅಭಿನಯಿಸಿದರು. ಕಾರಂತರ ಕಠಿಣ ರಂಗ ಶಿಬಿರದಲ್ಲಿ ಪಳಗಿದ ಅವರಿಗೆ ರಂಗಕಲೆ ಉಸಿರಾಯಿತು. ನೀನಾಸಂ ತಿರುಗಾಟದಲ್ಲಿ ಪಾಲ್ಗೊಂಡರು. ಚೆಕಾಫ್‌ನ ಥ್ರಿ ಸಿಸ್ಟರ್ಸ್, ಕೆ.ವಿ.ಸುಬ್ಬಣ್ಣ ಅವರ ಭಗವದಜ್ಜುಕೀಯಂ, ಕುವೆಂಪು ಅವರ ಸ್ಮಶಾನ ಕುರುಕ್ಷೇತ್ರ, ನಟರಾಜ ಹೊನ್ನವಳ್ಳಿ ನಿರ್ದೇಶನದ ಬಿರುಕು, ವೆಂಕಟರಮಣ ಐತಾಳ್ ನಿರ್ದೇಶನದ ಹಂಸ ದಮಯಂತಿ ಮುಂತಾದ ನಾಟಕಗಳಲ್ಲಿ ಅಭಿನಯಿಸಿದರು.

ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಪದವಿ ಪಡೆದ ಸಹನಾ ಬಣ್ಣದ ಲೋಕಕ್ಕೆ ಕಾಲಿಟ್ಟು ದುಡ್ಡು ಹೆಸರು ಗಳಿಸುವ ಅವಕಾಶವಿದ್ದರೂ, ಭಾವೈಕ್ಯತಾ ವೇದಿಕೆಯನ್ನು ಕ್ರಿಯಾಶೀಲಗೊಳಿಸುವಲ್ಲಿ ಆಸಕ್ತಳಾಗಿದ್ದಾರೆ. ರಂಗಕರ್ಮಿ ಸಿ.ಬಸವಲಿಂಗಯ್ಯ ನಡೆಸಿದ ರಂಗ ಶಿಬಿರದಲ್ಲಿ ಸಹನಾ ಅಭಿನಯದ ಹಲವು ಮುಖಗಳನ್ನು ಅರಿತರು. ಮೈಮ್ ರಮೇಶ್ ಗರಡಿಯಲ್ಲಿ ದೈಹಿಕ ರಂಗಭೂಮಿಯ ಮಹತ್ವ ತಿಳಿದರು. ನಿರ್ದೇಶಕರಾದ ಸುರೇಶ್ ಆನಗಳ್ಳಿ, ಸಿ.ಜಿ.ಕೆ., ನಟರಾಜ ಹೊನ್ನವಳ್ಳಿ, ಯೋಗಾನಂದ ಮುಂತಾದ ರಂಗ ದಿಗ್ಗಜರ ಒಡನಾಟದಿಂದ ಮತ್ತಷ್ಟು ಪಕ್ವವಾದರು. ಅಕ್ಕ, ಮಗಳು ಮಾತಾಡಿದಳು, ನಾವು ಮನುಜರು, ಚೋರ್ ಚೋರ್ ಪಕ್ಡೋ ಪಕ್ಡೋ, ಕೆಂಪು ಹೂ, ರಸ್ತೆಗೆ ಡಾಂಬರು ಬಂದಿದೆ, ಅರಿವು ಮುಂತಾದ ನಾಟಕಗಳಲ್ಲಿ ಅಭಿನಯಿಸಿದರು.

ಅಮೆರಿಕ ಪಪೆಟ್ ರಂಗಭೂಮಿಯ ಪೀಟರ್ ಶುಮನ್ ನಡೆಸಿದ ತರಬೇತಿಯಲ್ಲಿ ಪಾಲ್ಗೊಂಡು ಅವರು ಬೊಂಬೆ ಮತ್ತು ಮುಖವಾಡ ತಯಾರಿಸುವ ಕಲೆ ಕಲಿತರು. ಸ್ವೀಡನ್‌ನಿಂದ ಬಂದಿದ್ದ ಟಾಮ್ ಐರಿಕ್ ಅವರ ಬಳಿ ಮಕ್ಕಳ ರಂಗಭೂಮಿ ತರಬೇತಿ ಪಡೆದುಕೊಂಡರು. ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ಸ್ಕಾಲರ್‌ಶಿಪ್ ಪಡೆದು ದೆಹಲಿಯ ಎನ್‌ಎಸ್‌ಡಿಯಲ್ಲಿ ರಂಗತರಬೇತಿ ಪಡೆದರು.

ಎನ್‌ಎಸ್‌ಡಿ ವಿದ್ಯಾರ್ಥಿಯಾಗಿದ್ದಾಗಲೆ ಸಹನಾ, ಕಥೆಗಾರ ಫಕೀರ್ ಮುಹಮ್ಮದ್ ಕಟ್ಪಾಡಿ ಅವರ ಜುಲೇಕಾ ಕಥೆಯ ರಂಗರೂಪ 'ಜನ್ನತ್ ಮಹಲ್' ಗಾಗಿ ರಂಗಮಂಚದ ಚಿತ್ರಣವನ್ನೇ ಬದಲಿಸಿದ್ದರು. ಮುಸ್ಲಿಂ ಹೆಣ್ಣುಮಗಳೊಬ್ಬಳ ಮನದ ತೊಳಲಾಟವನ್ನು ರಂಗವಿನ್ಯಾಸದಲ್ಲಿಯೂ ಧ್ವನಿಸಲು ಪ್ರಯತ್ನಿಸಿದ್ದರು. ಬುರ್ಖಾದ ಪ್ರತೀಕವೆಂಬಂತೆ ಇಡೀ ರಂಗಮಂಚಕ್ಕೆ ಬುರ್ಖಾ ಹೊದಿಸಿದ್ದರು. ಪ್ರೇಕ್ಷಕರು ಮತ್ತು ರಂಗಂಚದ ನಡುವೆ ತೆಳುವಾದ ಪರದೆ ಅಳವಡಿಸಿ ಅದರೊಳಗಿನಿಂದಲೇ ಜನ ನಾಟಕ ನೋಡುವಂತೆ ಮಾಡಿದ್ದರು. ಕೀರ್ತಿ ಜೈನ್ ನಿರ್ದೇಶನದ ಏಕ್ ರುಖಾ ಹುವಾಫೈಸ್ಲಾ ನಾಟಕದಲ್ಲಿ ರಂಗವಿನ್ಯಾಸ ಮಾಡಿದ್ದ ಸಹನಾ ಈ ನಾಟಕದೊಂದಿಗೆ ಚೀನಾಕ್ಕೆ ಭೇಟಿ ನೀಡಿದ್ದರು. ಚೀನಾ ರಂಗಭೂಮಿ ಕುರಿತು ಉಪನ್ಯಾಸ,ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಎನ್‌ಎಸ್‌ಡಿಯಲ್ಲಿ ವಸ್ತ್ರವಿನ್ಯಾಸಕಿಯಾಗಿಯೂ ಗಮನ ಸೆಳೆದ ಅವರು ಡಾಲ್ಸ್ ಹೌಸ್ ನಾಟಕದ ನೋರಾ ಪಾತ್ರಕ್ಕೆ ಸೈಕಲ್ ಟೈರ್, ಟ್ಯೂಬ್, ಚೈನ್‌ಗಳನ್ನು ಬಳಸಿ ವಸ್ತ್ರವಿನ್ಯಾಸ ಮಾಡಿದ್ದರು. ಗ್ರೀಕ್ ಶೈಲಿಯಲ್ಲಿದ್ದ ದೊರೆ ಈಡಿಪಸ್ ನಾಟಕವನ್ನು ಲಂಕೇಶರು ಕನ್ನಡೀಕರಿಸಿದ ಕೃತಿಯನ್ನಿಟ್ಟುಕೊಂಡು ದೃಶ್ಯ ನಿರ್ದೇಶನ ಮಾಡಿ ಗಮನ ಸೆಳೆದರು. ಇದು ಅವರ ಇನ್ನೊಂದು ಪ್ರಯೋಗವಾಗಿತ್ತು. ಜೊತೆಗೆ ತಮಿಳು ಚಿತ್ರನಟ ಷಣ್ಮುಖರಾಜ ಅವರ ನಿಗಲ್ ಥಿಯೇಟರ್(ಮಧುರೈ) ರಂಗ ತಂಡಕ್ಕೆ ವಸ್ತ್ರ, ಪರಿಕರ, ಬೆಳಕು ವಿನ್ಯಾಸ ಮಾಡಿದ್ದಾರೆ. ಬೆಂಗಳೂರಿನ ಎನ್‌ಎಸ್‌ಡಿ ಶಾಖೆಯಲ್ಲಿ ತರಗತಿ ಸಂಚಾಲಕಿಯಾಗಿ ಕೆಲಸ ಮಾಡಿದ್ದಾರೆ. ಈಚೆಗೆ ದೇವರಾಜ ಅರಸು ಬಗೆಗೆ ನಾಟಕ ನಿರ್ದೇಶಿಸಿ ಕರ್ನಾಟಕದಾದ್ಯಂತ ಸುತ್ತಾಡಿ ಗಮನ ಸೆಳೆದಿದ್ದಾರೆ.

ಇದೀಗ ಸಹನಾ ತನ್ನ ಮೂಲ ಗೂಡಾದ ಭಾವೈಕ್ಯತಾ ವೇದಿಕೆಗೆ ಹೊಸ ಆಯಾಮ ನೀಡುವ ಕನಸು ಕಾಣುತ್ತಿದ್ದಾರೆ. ಅಂತೆಯೇ ಈ ಭಾಗದ ಬಯಲಾಟವನ್ನು ಮತ್ತೆ ಹೊಸ ನೆಲೆಯಲ್ಲಿ ಶೋಧಿಸಬೇಕೆಂದು ಮಕ್ಕಳಿಗಾಗಿ 'ವೀರ ಅಭಿಮನ್ಯು ಬಯಲಾಟ ಕಾಳಗ' ವನ್ನು ಹೊಸತನದಿಂದ ರಂಗಕ್ಕೆ ತಂದಿದ್ದರು. ಭಾವೈಕ್ಯತಾ ವೇದಿಕೆ ರೂಪಿಸಿದ ಪ್ರತಿಭಾವಂತ ರಂಗತಜ್ಞರಲ್ಲಿ ಸಹನಾ ಕೂಡಾ ಒಬ್ಬರು. ಬಹುಶಃ ಈ ವೇದಿಕೆಯನ್ನು ಮತ್ತಷ್ಟು ಎತ್ತರಕ್ಕೆ ಕಟ್ಟಿ ಬೆಳೆಸಬಹುದಾದ ಚೈತನ್ಯವಿರುವ ಪ್ರತಿಭಾವಂತೆ. ಪಾದರಸದಂತೆ ಲವಲವಿಕೆಯಿಂದಿರುವ ಸಹನಾ ರಂಗ ಭೂಮಿಯ ಸೂಕ್ಷ್ಮತೆಯನ್ನು ಚುರುಕಾಗಿ ಅರಿಯುವಂತವರು. ಅಂತೆಯೇ ಭವಿಷ್ಯದ ಕನ್ನಡ ರಂಗಭೂಮಿಯ ಬಹುಮುಖ್ಯ ರಂಗತಜ್ಞರಲ್ಲಿ ಒಬ್ಬರಾಗಿ ರೂಪುಗೊಳ್ಳುವ ಶಕ್ತಿ ಇರುವವರು.

ಸಂಗಾತಿ ರಿಯಾಜ್ ಸಿಹಿಮೊಗೆ ಅವರ ಜೊತೆಗೂಡಿ ವೃತ್ತಿ ರಂಗಭೂಮಿಯ ರೆಪರ್ಟರಿ ತೆರೆಯುವ ಮತ್ತು ರಂಗ ತತ್ವದ ಮೇಲೆ ಪ್ರಾಥಮಿಕ ಶಾಲೆಯೊಂದನ್ನು ಆರಂಭಿಸುವ ಕನಸು ಸಹನಾ ಅವರದು.. ಅವರಿಗೆ ನಮ್ಮೆಲ್ಲರ ಹಾರೈಕೆಯಿರಲಿ. ಇದೀಗ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯೆಯಾಗಿ ಆಯ್ಕೆಯಾಗಿದ್ದಾರೆ. ಹೊಸಪೇಟೆಯ ಅಜಾದ್ ನಗರದ ಸ್ಲಂನಲ್ಲಿ ಹಿರಿಯ ರಂಗಕರ್ಮಿ ಅಬ್ದುಲ್ ಅವರು ರೂಪಿಸಿದ 'ಭಾವೈಕ್ಯತಾ ವೇದಿಕೆ'ಯಲ್ಲಿ ಸಹನಾ ರೂಪುಗೊಂಡ ಸಹನಾ ವಿಶ್ವವಿದ್ಯಾಲಯವೊಂದರ ಸಿಂಡಿಕೇಟ್ ಸದಸ್ಯೆ ಯಾಗುವುದು ಸಣ್ಣ ಸಾಧನೆಯಲ್ಲ. ಸಹನಾಳನ್ನು ಗುರುತಿಸಿದ ಕರ್ನಾಟಕ ಸರಕಾರಕ್ಕೂ ಮುಖ್ಯಮಂತ್ರಿಗಳಾದ Siddaramaiah ಸರ್ ಗೂ ಅಭಿನಂದನೆಗಳು.

ಹಂಪಿ ಟೈಮ್ಸ್
HAMPI TIMES

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ | ಸಂವತ್ಸರ: ಕ್ರೋಧಿ

**29–08–2024 –ಗುರುವಾರ**

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಆರಿದ್ರ |
| ಯೋಗ | : ಸಿದ್ಧಿ |
| ಕರಣ | : ಭವ |
| ಸೂರ್ಯೋದಯ | : 06:09:20 |
| ಸೂರ್ಯಾಸ್ತ | : 18:45:47 |
| ರಾಹು ಕಾಲ | : 14:02–15:37 |
| ಯಮಘಂಡ ಕಾಲ | : 06:09–07:44 |
| ಗುಳಿಕ ಕಾಲ | : 09:18–10:53 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 28–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1628.256 ಅಡಿ |
| ಒಳ ಹರಿವು | 21678 ಕ್ಯುಸೆಕ್ |
| ಹೊರ ಹರಿವು | 10107 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 88.755 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1625.79 ಅಡಿ |
| ಒಳ ಹರಿವು | 220 ಕ್ಯುಸೆಕ್ |
| ಹೊರ ಹರಿವು | 6723 ಕ್ಯುಸೆಕ್ |
| ಸಾಮರ್ಥ್ಯ | 79.101 ಟಿಎಂಸಿ |

# ಕನ್ನಡ ವಿವಿ ನೈಜ ಬುದ್ಧಿಮತ್ತೆ ಶೋಧಿಸುವಲ್ಲಿ ಸದಾ ನಿರತ

### ವಿಶ್ರಾಂತ ಕುಲಪತಿ ಡಾ.ಬಿ.ಎ. ವಿವೇಕ ರೈ ಹೇಳಿಕೆ | ಹಳೇ ವಿದ್ಯಾರ್ಥಿಗಳ ಸಂಘ ಉದ್ಘಾಟನೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ವಿಶ್ವವಿದ್ಯಾಲಯವು ಸಂಶೋಧನೆ ಮಾಡಿರುವ ದೇಶಿ ಜ್ಞಾನದ ಮುಂದೆ ಇಂದಿನ ಕೃತಕ ಬುದ್ಧಿಮತ್ತೆಯು ಸ್ಪರ್ಧೆ ಮಾಡಲು ಸಾಧ್ಯವಿಲ್ಲ. ವಿಶ್ವವಿದ್ಯಾಲಯವು ನೈಜ ಬುದ್ಧಿ ಮತ್ತೆಯನ್ನು ಶೋಧಿಸುವಲ್ಲಿ ಸದಾ ನಿರತ ವಾಗಿದೆ. ಇಂತಹ ವಿಶ್ವವಿದ್ಯಾಲಯದ ಸ್ವಾಯುತ್ತ ತೆಯ ಜೊತೆಗೆ ಅಸ್ಮಿತೆ ಮತ್ತು ಅನನ್ಯತೆಯನ್ನು ಉಳಿಸಿಕೊಳ್ಳಲು ಸಮಾಜ ಮತ್ತು ಸರ್ಕಾರದ ನೆರವು ತುಂಬಾ ಮುಖ್ಯ ಎಂದು ಕನ್ನಡ ವಿವಿ ವಿಶ್ರಾಂತ ಕುಲಪತಿ ಡಾ.ಬಿ.ಎ. ವಿವೇಕ ರೈ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಬುಧವಾರ ಆಯೋಜಿಸಿದ್ದ ಹಳೆಯ ವಿದ್ಯಾರ್ಥಿಗಳ ಸಂಘದ ಉದ್ಘಾಟನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇತರೆ ವಿಶ್ವವಿದ್ಯಾಲಯಗಳಂತೆ ಕನ್ನಡ ವಿವಿಯನ್ನು ಪರಿಗಣಿಸುವುದು ಸರಿಯಲ್ಲ. ನಾಡು–ನುಡಿ ಕುರಿತಂತೆ ದೂರದೃಷ್ಟಿಯ ಯೋಜನೆಗಳನ್ನು ರೂಪಿಸುವ ಶಕ್ತಿ ಕನ್ನಡ ವಿಶ್ವವಿದ್ಯಾಲಯಕ್ಕಿದೆ. ವಿಶ್ವವಿದ್ಯಾಲಯದ ವಿವಿಧ ನಿಕಾಯಗಳಲ್ಲಿ ನಡೆದಿರುವಷ್ಟು ಸಂಶೋಧನಾ ಕಾರ್ಯಗಳು, ಸಾಂಸ್ಥಿಕ ಮತ್ತು ವೈಯಕ್ತಿಕ ಯೋಜನೆಗಳು ರಾಜ್ಯದ ಯಾವುದೇ ವಿಶ್ವವಿದ್ಯಾಲ ಯಗಳಲ್ಲಿ ಕಂಡುಬರುವುದಿಲ್ಲ. ಇಂತಹ ಕಾರ್ಯಗಳನ್ನು ವಿಶ್ವವಿದ್ಯಾಲಯ ನಿರಂತರವಾಗಿ 33 ವರ್ಷಗಳಿಂದ ಮಾಡಿಕೊಂಡು ಬರುತ್ತಿದೆ. ಇದನ್ನು ಯಾವುದೇ ಪ್ರಾಧಿಕಾರಗಳು ಅಕಾಡೆಮಿಗಳು ಮಾಡಲು ಸಾಧ್ಯವಿಲ್ಲ. ಕನ್ನಡ ವಿಶ್ವವಿದ್ಯಾಲಯದ ಬಗ್ಗೆ ಇರುವ ತಪ್ಪು ಕಲ್ಪನೆ ಮತ್ತು ಪೂರ್ವಗ್ರಹಗಳನ್ನು ಹೋಗಲಾಡಿಸಿ ಜಾಗತಿಕ ಮಟ್ಟದಲ್ಲಿ ವಿಶ್ವವಿದ್ಯಾಲಯದ ಎಲ್ಲ ಕೆಲಸ–ಕಾರ್ಯಗಳು ಮಾಧ್ಯಮಗಳ ಮೂಲಕ ಪ್ರಸಾರವಾಗಬೇಕು. ಇಲ್ಲಿ ನಡೆಯುವ ಸಂಶೋಧನೆಯ ಫಲಿತಗಳನ್ನು ಡಿಜಿಟಲ್ ರೂಪದಲ್ಲಿ ಪ್ರಸರಣ ಮಾಡಬೇಕು. ಕನ್ನಡ ನಾಡು–ನುಡಿ, ಸಂಸ್ಕೃತಿಯ ಉಳಿವಿಗಾಗಿ ಸದಾ ಶ್ರಮಿಸುತ್ತಿರುವ ವಿಶ್ವವಿದ್ಯಾಲಯವನ್ನು ವಿಶೇಷ ವಾಗಿ ಪರಿಗಣಿಸಿ ಇದರ ಅಭಿವೃದ್ಧಿಗಾಗಿ ಸರ್ಕಾರಗಳು ಆರ್ಥಿಕ ಮತ್ತು ನೈತಿಕ ಬೆಂಬಲವನ್ನು ನೀಡಬೇಕು. ಜೊತೆಗೆ ನಾಡಿನಲ್ಲಿರುವ ಉದ್ಯಮ ಸಂಸ್ಥೆಗಳು ಕೂಡ ತಮ್ಮ ಲಾಭದ 10ನೇ 1 ಭಾಗವನ್ನು ವಿಶ್ವವಿದ್ಯಾಲಯದ ಅಭಿವೃದ್ಧಿಗೆ ನೀಡಬೇಕು ಎಂದರು. ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘವು ಶೈಕ್ಷಣಿಕ, ಆರ್ಥಿಕ ಮತ್ತು ನೈತಿಕ ಸಹಕಾರವನ್ನು ನೀಡುವುದರ ಮೂಲಕ ಭಾವನಾತ್ಮಕ ಸಂಬಂಧವನ್ನು ಬೆಸೆಯಬೇಕು. ಇದರ ಜೊತೆಗೆ ಸಂಘವು ಪ್ರೀತಿ ಮತ್ತು ಒಳಗೊಳ್ಳುವಿಕೆಯನ್ನು ರೂಢಿಸಿ ಕೊಳ್ಳಬೇಕು ಎಂದು ತಿಳಿಸಿದರು.

ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವ ಡಾ.ಎ. ಚೆನ್ನಪ್ಪ ಮಾತನಾಡಿ, ಶಿಕ್ಷಣ, ಸಂಶೋಧನೆ ಮತ್ತು ಸಂಘಟನೆಯೊಂದಿಗೆ ವಿಶ್ವವಿದ್ಯಾಲಯದ ಇನ್ನಷ್ಟು ಕೆಲಸ ಕಾರ್ಯಗಳಿಗೆ ನಾವು ಸದಾ ಸಹಕಾರವನ್ನು ನೀಡುತ್ತೇವೆ ಎಂದು ತಿಳಿಸಿದರು.

ಕಿರ್ಲೋಸ್ಕರ್ ಮಹಿಳಾ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾದ ಕಮಲ ಗುಮಾಸ್ತೆ ಮಾತನಾಡಿ, ಕನ್ನಡ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿ ಗಳ ಸಂಘವು ನಶಿಸಿ ಹೋಗುವಂತಹ ಕಲೆ, ಸಮುದಾಯಗಳನ್ನು ಮುಖ್ಯವಾಹಿನಿಗೆ ತರು ವಂತಹ ಸಮಾಜಮುಖಿ ಕಾರ್ಯಗಳನ್ನು ಮಾಡಬೇಕು ಎಂದು ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಹಳೆಯ ವಿದ್ಯಾರ್ಥಿಗಳ ಸಂಘವು ವಿಶ್ವವಿದ್ಯಾಲಯ ಮತ್ತು ಸಮಾಜವನ್ನು ಬೆಸೆಯುವ ಕೊಂಡಿಯಾಗಬೇಕು ಎಂದರು.

ಕನ್ನಡ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾದ ಡಾ.ಎಸ್.ವೈ. ಗುರುಶಾಂತ, ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಡಾ. ವಿಜಯ್ ಪೂಣಚ್ಚ ತಂಬಂಡ, ಹಳೆಯ ವಿದ್ಯಾರ್ಥಿಗಳ ಸಂಯೋಜನಾ ಘಟಕದ ಸಮನ್ವಯಾಧಿಕಾರಿ ಡಾ.ಹೆಚ್.ಡಿ. ಪ್ರಶಾಂತ್ ಮಾತನಾಡಿದರು. ಹಳೆಯ ವಿದ್ಯಾರ್ಥಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಡಾ.ನಾಗಣ್ಣ ಕಿಲಾರಿ, ಡಾ. ಓ.ದೇವರಾಜ್, ಡಾ.ಅಮರೇಶ್ ಯತಗಲ್ ನಿರ್ವಹಿಸಿದರು.

# ಭ್ರೂಣ ಲಿಂಗ ಪತ್ತೆ, ಭ್ರೂಣಲಿಂಗ ಆಯ್ಕೆಗೆ ಪ್ರಯತ್ನಿಸಿದಲ್ಲಿ ಕಠಿಣ ಕ್ರಮ

### ಕುಟುಂಬ ಕಲ್ಯಾಣಾಧಿಕಾರಿ ಡಾ ಲಿಂಗರಾಜು ಹೇಳಿಕೆ



■ **ಹಂಪಿ ಟೈಮ್ಸ್ ಕೊಪ್ಪಳ**

ಪಿ.ಸಿ & ಪಿ.ಎನ್.ಡಿ.ಟಿ ಕಾಯ್ದೆ ಅಡಿ ಭ್ರೂಣ ಲಿಂಗ ಪತ್ತೆ ಮತ್ತು ಭ್ರೂಣಲಿಂಗ ಆಯ್ಕೆಗೆ ಅವಕಾಶವಿಲ್ಲ. ಆದಾಗ್ಯೂ ಇಂತಹ ಕಾನೂನು ಬಾಹಿರ ಕ್ರಮಗಳಲ್ಲಿ ಭಾಗಿಯಾದಲ್ಲಿ ಅಂತವರ ವಿರುದ್ಧ ಕಠಿಣವಾದ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ ಟಿ.ಲಿಂಗರಾಜು ಅವರು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಆಗಸ್ಟ್ 27ರಂದು ಆಯೋಜಿಸಿದ್ದ ಪಿ.ಸಿ ಮತ್ತು ಪಿ.ಎನ್.ಡಿ.ಟಿ ಕಾಯ್ದೆ ಮತ್ತು ಎಂ.ಟಿ.ಪಿ ಕಾಯ್ದೆಯ ಅಡಿ ಬರುವ ಜಿಲ್ಲಾ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಪಿ.ಸಿ ಮತ್ತು ಪಿ.ಎನ್.ಡಿ.ಟಿ ಕಾಯ್ದೆ–1994 ರಡಿಯಲ್ಲಿ ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣ ಲಿಂಗ ಪತ್ತೆ ಕಾನೂನು ಬಾಹಿರ ಮತ್ತು ಶಿಕ್ಷಾರ್ಹ ಅಪರಾಧವಾಗಿದೆ. ಕಾಯ್ದೆ ಅನುಸಾರ ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣ ಲಿಂಗ ಪತ್ತೆ ಕುರಿತಂತೆ ಯಾವುದೇ ರೀತಿಯ ಜಾಹೀರಾತು ನೀಡುವಂತಿಲ್ಲ. ಸರ್ಕಾರಿ ಅಥವಾ ಖಾಸಗಿ ಯಾವುದೇ ವೈದ್ಯರು ಇಂತಹ ಕೃತ್ಯಗಳಲ್ಲಿ ಭಾಗಿಯಾದಲ್ಲಿ ಅವರ ವಿರುದ್ಧ ಕಠಿಣ ಕ್ರಮಕ್ಕೆ ಅವಕಾಶವಿದೆ. ಈ ಕಾಯ್ದೆಯಡಿ ತಪಾಸಣಾ ಮತ್ತು ಮೇಲ್ವಿಚಾರಣೆಗಾಗಿ ಜಿಲ್ಲಾ ಮಟ್ಟದ ಸಲಹಾ ಸಮಿತಿ ಹಾಗೂ ತಪಾಸಣಾ ಸಮಿತಿಯನ್ನು ರಚಿಸಲಾಗಿದೆ. ತಪಾಸಣಾ ಸಮಿತಿಯು ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಭೇಟಿ ನೀಡಿ, ಪರಿಶೀಲಿಸಿ, ಸಲಹಾ ಸಮಿತಿ ಸಭೆಯಲ್ಲಿ ವರದಿ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಸ್ಪತ್ರೆಯ ಮಕ್ಕಳ ವಿಭಾಗದ ಮುಖ್ಯಸ್ಥರು ಹಾಗೂ ಮಕ್ಕಳ ತಜ್ಞರಾದ ಡಾ.ಗಿರೀಶ, ರೆಡಿಯಾಲಜಿಸ್ಟ್ ಡಾ.ದಯಾನಂದಸ್ವಾಮಿ, ಯುನಿಸೆಫ್ ಮಕ್ಕಳ ರಕ್ಷಣಾ ಯೋಜನೆಯ ಹರೀಶ್ ಜೋಗಿ, ವಕೀಲರಾದ ಶಂಕರ್ ಬಿಸರಳ್ಳಿ,ಪ ಎನ್.ಜಿ.ಓ.ಗಳ ಪ್ರತಿನಿಧಿಗಳಾದ ಡಾ ವಿಶ್ವನಾಥ ಬಸವರಾಜ ನಲ್ವಾಡ, ಶಂಕ್ರಪ್ಪ ಬಿ ಸುರಳ್, ರೇಷ್ಮಾ ಹಾಗೂ ಸಲೀಮಾ ಜಾನ್ ಸೇರಿದಂತೆ ಪಿ.ಸಿ & ಪಿ.ಎನ್.ಡಿ.ಟಿ ಜಿಲ್ಲಾ ಮಟ್ಟದ ಸಲಹಾ ಸಮಿತಿ ಹಾಗೂ ತಪಾಸಣಾ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

# ಮಕ್ಕಳು ವಿದ್ಯಾವಂತರಾದರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗಲಿದೆ

### ಶಾಸಕ ಹೆಚ್.ಆರ್.ಗವಿಯಪ್ಪ ಹೇಳಿಕೆ | ಸಾಮಾಜಿಕ ಕಾಳಜಿ ಇರಲಿ



■ **ಹಂಪಿ ಟೈಮ್ಸ್ ಹೊಸಪೇಟೆ**

ಯಾವುದೇ ಸಮಾಜವು ಪ್ರಗತಿಯಾಗ ಬೇಕಾದರೆ ಆ ಸಮಾಜದ ಮಕ್ಕಳು ವಿದ್ಯಾವಂತರಾಗಬೇಕು. ಈ ನಿಟ್ಟಿನಲ್ಲಿ ಯೋಚಿಸಿ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡುವುದು ಪಾಲಕರಾದ ನಮ್ಮ ಜವಾಬ್ದಾರಿ ಯಾಗಿದೆ ಎಂದು ಶಾಸಕ ಹೆಚ್.ಆರ್.ಗವಿಯಪ್ಪ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹೊಸಪೇಟೆ ನಗರಸಭೆ ವತಿಯಿಂದ ಬುಧವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಬ್ರಹ್ಮಶ್ರೀ ನಾರಾಯಣಗುರು ಅವರ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಬ್ರಹ್ಮಶ್ರೀ ನಾರಾಯಣ ಗುರುಗಳು ಸಮಾಜದ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಹಿಂದುಳಿದ ವರ್ಗಗಳ ಹಾಗೂ ದಲಿತರ ಏಳಿಗೆಗೆ ಶ್ರಮಿಸಿದರು. ಬಸವಣ್ಣನವರಂತೆ ಸಮಾಜ ಬದಲಾವಣೆಯ ಆಶಯ ಹೊಂದಿದ್ದರು. ಜನಮುಖಿ ಸಿದ್ಧಾಂತಕ್ಕೆ ಬದ್ಧರಾಗಿ ಕೆಲಸ ಮಾಡಿದರು. ನಮ್ಮ ಸಮಾಜದಲ್ಲಿ ಕಡಿಮೆ ಜನಸಂಖ್ಯೆಯ ಸಮುದಾಯಗಳು ಸಾಕಷ್ಟಿವೆ. ಇವುಗಳ ಅಭಿವೃದ್ಧಿಗೆಂದೇ ಸರ್ಕಾರವು ಹಲವಾರು ನಿಗಮಗಳನ್ನು ರಚಿಸಿ ಅನುದಾನ ಮೀಸಲಿರಿಸಿ ಅಂತಹ ಸಮುದಾಯಗಳ ಏಳ್ಗೆಗೆ ಶ್ರಮಿಸಲಾಗುತ್ತಿದೆ. ಆಯಾ ನಿಗಮ ಗಳಲ್ಲಿ ಇರುವ ಹಲವಾರು ಯೋಜನೆಗಳ ಬಗ್ಗೆ ಮಾಹಿತಿ ಪಡೆದು ಕೊಂಡು ವಿವಿಧ ಯೋಜನೆಗಳ ಸದುಪ ಯೋಗ ಪಡೆದು ಸಣ್ಣ ಸಣ್ಣ ಸಮುದಾಯದ ಜನರು ಮುಂದೆ ಬರಬೇಕು ಎಂದು ಶಾಸಕರು ಸಲಹೆ ಮಾಡಿದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮಾತ ನಾಡಿ, ಸರಕಾರವು ಹಲವಾರು ಜಯಂತಿ ಗಳನ್ನು ಆಚರಣೆ ಮಾಡುತ್ತಿದೆ. ಈ ಮೂಲಕ ಮಹಾತ್ಮರ ಆಶಯಗಳು, ಸಿದ್ಧಾಂತ ಹಾಗೂ ಅವರ ಸಮಾಜಮುಖಿ ಕಾರ್ಯಗಳನ್ನು ಜನತೆಗೆ ತಿಳಿಸುವ ಕಾರ್ಯವಾಗುತ್ತಿದೆ. ಬ್ರಹ್ಮಶ್ರೀ ನಾರಾಯಣ ಗುರು ಅವರ ಕಾರ್ಯಗಳುಸದಾಕಾಲಸ್ಮರಣೀಯವಾಗಿವೆ. ಅಸ್ಪೃಶ್ಯತೆಯ ಆಚರಣೆ ತಡೆಯುವ ಮಹತ್ವದ ಕಾರ್ಯ ಮಾಡಿದರು. ಜನರಲ್ಲಿ ದೇಶಭಕ್ತಿಯ ಭಾವವನ್ನು ಬೆಳೆಸಿದರು ಎಂದು ತಿಳಿಸಿದರು.

**ಪ್ರತಿಭಾ ಪುಸ್ಕಾರ ಪ್ರದಾನ:** 2024–25ನೇ ಸಾಲಿನ ಎಸ್ಎಸ್ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಸಾಧನೆ ಮಾಡಿದ ಈಡಿಗ ಸಮಾಜದ ವಿದ್ಯಾರ್ಥಿಗಳಾದ ಹರಪನಹಳ್ಳಿ ತಾಲೂಕಿನ ಇ.ವಿ. ಅಜಯ್ ಕುಮಾರ, ಇ.ವಿ.ಐಶ್ವರ್ಯ, ಇ.ಟಿ.ಅರವಿಂದ, ಹೂವಿನಹಡಗಲಿ ತಾಲೂಕಿನ ಅನುಷ್ ಈಡಿಗರ, ಈಡಿಗರ ಅಭಿಷೇಕ, ಇ.ಸಂಜನ, ಕೂಡ್ಲಿಗಿ ತಾಲೂಕಿನ ಆಶಾ, ಇ.ಜಿ.ಸುಪ್ರಿಯಾ, ಇ.ಪುಷ್ಪವತಿ, ಹೊಸಪೇಟೆ ತಾಲೂಕಿನ ಇ.ಹರ್ಷಿತ, ಇ.ಹರಿಪ್ರಸಾದ್ ಮತ್ತು ಇ. ಆಯುಶ್ ಅವರಿಗೆ ಇದೆ ವೇಳೆ ಸನ್ಮಾನಿಸಿ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಯಿತು.



ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಇ. ಬಾಲಕೃಷ್ಣ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲೀಂ ಪಾಷಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ದಲಿಂಗೇಶ ರಂಗಣ್ಣನವರ, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ಸೇರಿದಂತೆ ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಈಡಿಗ ಸಮಾಜದ ಅಧ್ಯಕ್ಷ ಚಂದ್ರಣ್ಣ, ಉಪಾಧ್ಯಕ್ಷರು, ಸದಸ್ಯರು ಇನ್ನಿತರರು ಉಪಸ್ಥಿತರಿದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲೀಷ್

# Prose : Gentleman of Rio-En?Medio

Extracts : Most important 3 marks Extracts
Read the statements and answer the questions that follows

**1. ``These Americans, they are good people . They are ready to pay you for the additional land."**
a. Who is the speaker ?
Ans : Don Anselmo.
b. When did the speaker say so?
Ans : When don Anselmo's land was surveyed he was owned more than eight acres.
c. How did he react to it?
Ans : Don Anselmo was not happy to hear these words. He refused to take more money.

**2. ``This was bad. Don Anselmo .`` I pleaded**
a. Who pleaded?
Ans : The story teller pleaded
b. What does this refer to?
Ans :Don Anselmo said he sold the land but not trees
c. How did he define himself?
Ans : Don Anselmo said that when child was born in village.. his mother planted tree in its name. So trees belongs to children not for me.

**3. ``One day they come to office to complain"**
a. Who does `they' refer to?
Ans : They refers to Americans .
b. Who did they complain about?
Ans : Children of Rio-en-Medio
c. What was the complaint?
Ans : The children were overrunning their property.

**4. ``It took months of negotiation to come to an understanding with the old man"**
a. Who is the old man refer here?
Ans : Don Anselmo .
b. What was the negotiation about?
Ans : Selling of old man's land to Americans .
c. Why do you think it took months to come to an understanding?
Ans : old man was not in hurry to sell his land

**5. ``We have made a discovery"**
a. Who had made the discovery
Ans : The Americans .
b. What was the discovery?
Ans : The land was more than 8 acres and fertile.
c. What was the result of the discovery?
Ans : Because of more land they are ready to pay more amount.

**6. ``I did not sell them the trees in the orchard."**
a. Who is the speaker here?
Ans : Don Anselmo .
b. Who is the them mentioned here?
Ans : Americans
c. Why did not the speaker sell the trees?
Ans : He thought the trees belongs to children of the village.

**7. "The trees in that orchard are not mine"**
a. Who said this?
Ans : Don Anselmo
b. Who, according to speaker, does the trees Belong to?
Ans : The trees belongs to the children of Rio en medio
c. Why did the speaker say this?
Ans : Because trees belongs to children of Rio en medio

8. ``The trees in that orchard are not mine"
a. Who said this?
Ans : Don Anselmo
b. Who according to speaker, does the trees belong to?
Ans : According to speaker trees belongs to children
c. Why did the speaker say this?
Ans : The speaker said so because he thought trees belonged to the children of Rio-en-Medio

9. One such thing was that they were to have the complete possession of the property
a. Who said this?
Ans : The Author
b. Who does they refer here?
Ans : The Americans
c. How did they get complete possession of the property?
Ans : When old man signed the deed the Americans got the complete possession of the property.

10. ``I didn't sale the trees, because I couldn't they are not mine"
a. Who is the speaker ?
Ans : Don Anselmo
b. Who did he say this to?
Ans : Lawyer
c. Why didn't he sell the trees
Ans : He did not sell the trees because trees belongs to children.

www.hampitimes.com - Hampi Times Margadarshi

Prepared by : **Vanitha.H.M.** English Teacher. G.B.G.H.S. Hagaribommanahalli, Vijayanagara Dist

ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055